ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 21

೨೩ ಮಾರ್ಚಿ ೧೯೫೮

ಪುಟ ೧೦ ಬೆಲೆ: ೧೩ ನ. ಪೈಸೆ

ನಿಜಲಿಂಗಪ್ಪನವರ ಸರಕಾರ ಉರುಳುವ ಸ್ಥಿತಿಯಲ್ಲಿ

ಮೈಸೂರು ರಾಜ್ಯದ ಕಾಂಗ್ರೆಸ್ಸಿನಲ್ಲಿ ಪರಂಪರಾನುಗತವಾಗಿ ಬಂದಿರುವ ವಿಶ್ವಾಸ ಅವಿಶ್ವಾಸ ನಿರ್ಣಯಗಳ ಹಾವಳಿ ಆರಂಭವಾಗಿದೆ. ಸಹಿಸಂಗ್ರಹಣಕಾರ್ಯ ತೀವ್ರತೆಯಿಂದ ಸಾಗುತ್ತಿದೆ. ನಿಜಲಿಂಗಪ್ಪನವರ ಸರಕಾರ ಆಡಳಿತೆಯಲ್ಲಿರುವುದು ಇನ್ನು ಕೆಲವು ದಿನಗಳ ಮಾತ್ರ ಎನ್ನುವಷ್ಟು ಮಟ್ಟಿಗೆ ಪ್ರಚಾರ ನಡೆಯುತ್ತಿದೆ.

ನಿಜಲಿಂಗಪ್ಪನವರ ಮಂತ್ರಿಮಂಡಲ ಅಧಿಕಾರಕ್ಕೆ ಬಂದಂದಿನಿಂದಲೂ ಅದು ಹೆಚ್ಚು ದಿನ ಅಧಿಕಾರದಲ್ಲಿ ಉಳಿಯುವುದಿಲ್ಲವೆಂದು ವೇದ್ಯವಾಗಿದ್ದಿತು. ನಾಯಕರನ್ನಾಗಿ ನಿಜಲಿಂಗಪ್ಪನವರನ್ನು ಅಧಿಕಾರದಲ್ಲಿರಿಸಿದಾಗ ಒಮ್ಮತವಿದ್ದರೂ ಸಹ ಅದು ಕೇವಲ ಔಪಚಾರಿಕವಾಗಿತ್ತು ಅಷ್ಟೆ. ಒಳಗುಂಪುಗಳ ಚಟುವಟಿಕೆ ಇದ್ದು ಹೊಗೆಯಾಡುತ್ತಿದ್ದು ಇದೀಗ ಸ್ಪಷ್ಟ ರೂಪವನ್ನು ತಾಳಿದೆ.

ನಿಜಲಿಂಗಪ್ಪನವರ ವಿರೋಧವಿರುವ ಹನುಮಂತಯ್ಯ, ಚನ್ನಯ್ಯ, ಅಂಬಲಿ ಗುಂಪುಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಮೂಲೆಗೊತ್ತಿ ಒಂದು ಗೂಡಿ ನಿಜಲಿಂಗಪ್ಪನವರನ್ನು ಉರುಳಿಸಲು ಯತ್ನಿಸುತ್ತಿದ್ದಾರೆ. ಈ ಸಂದರ್ಭದಲ್ಲಿ "ತಾಯಿನಾಡು" ಪತ್ರಿಕೆಯ ವಿಶೇಷ ರಾಜಕೀಯ ಬಾತ್ಮೀದಾರರು ವರದಿ ಮಾಡಿರುವ ಅಂಶ ಸ್ವಾರಸ್ಯವಾಗಿದೆ. ನಾಯಕರ ಮೇಲೆ ಅವಿಶ್ವಾಸದ ಬಗ್ಗೆ ಬರೆಯುತ್ತಾ ಅವರು "ವಿಶಾಲವಾದ ಮೈಸೂರಿನ ಭವಿಷ್ಯದ ಸಲುವಾಗಿ ತಮ್ಮಗಳ ಭಿನ್ನಾಭಿಪ್ರಾಯಗಳನ್ನು ದೂರೀಕರಿಸುವುದೂ, ಮರೆಯಲಾಗದಂತಹ ಕಹಿ ನೆನಪುಗಳನ್ನೂ ಬದಿಗಿಟ್ಟು ಪರಸ್ಪರ ಸಹಕರಿಸಿ, ಸ್ಥಿರವಾದ ಒಗ್ಗಟನ್ನು ಕಾಂಗ್ರೆಸ್ ರಾಜಕೀಯದಲ್ಲಿ ಮಾಡಿಸಲು ಸಂಕಲ್ಪಿಸಿ, ಮಾರ್ಗದರ್ಶನ ಮಾಡಿದ ಮುಂಖಂಡರ ಸಮ್ಯಮ ರಾಜಕೀಯನ್ನು ಯಾರಾದರೂ ಅಭಿನಂದಿಸಬೇಕಾಗಿದೆ.

"ಜರ್ಮನಿ ಜಪಾನುಗಳ ವಿರುದ್ಧವಾಗಿ ಯುದ್ಧ ಒದಗಿಬಂದಾಗ ರಷ್ಯಾ-ಇಂಗ್ಲೆಂಡ್ ಹಾಗೂ ಅಮೆರಿಕಾ ಒಂದಾದುದು ವಿಸ್ಮಯವೆಂದು ಭಾವಿಸಲಾಗಿದ್ದಿತು. ಅದೇ ರೀತಿ, ಮೈಸೂರಿನಲ್ಲಿ ಎಂದೆಂದಿಗೂ ಒಂದು ಗೂಡುವುದಿಲ್ಲದಿಂದು ಭಾವಿಸಲಾಗಿದ್ದ ಶಕ್ತಿಗಳು-ವ್ಯಕ್ತಿಗಳು, ನಾಯಕತ್ವದ ಬದಲಾವಣೆಗಾಗಿ "ತಮ್ಮತನವನ್ನು" ತೃಣೀಕರಿಸಿರುವುದು ವಿದಿತವಾಗಿದೆ" ಎಂದು ತಿಳಿಸಿದ್ದಾರೆ. ಅಂದಮೇಲೆ ನಿಜಲಿಂಗಪ್ಪನವರ ವಿರುದ್ಧವಾಗಿ ಕತ್ತಿ ಕಟ್ಟಿರುವವರು ಎಷ್ಟು ಮಟ್ಟಿಗೆ ಪ್ರಯತ್ನಿಸುತ್ತಿದ್ದಾರೆಂದು ಗೊತ್ತಾಗುತ್ತದೆ. ಕಾಂಗ್ರೆಸ್ಸಿನಲ್ಲಿ ಒಂದು ಗುಂಪನ್ನು ಪ್ರತಿನಿಧಿಸುವ ತಾಯಿನಾಡು ಪತ್ರಿಕೆಯ ಹೀಗೆ ಹೇಳಿರುವುದಲ್ಲಿ ಉತ್ಪ್ರೇಕ್ಷೆ ಏನಿಲ್ಲ. ಗುಂಪು ರಾಜಕೀಯ ಕಾಂಗ್ರೆಸ್ ಪಕ್ಷದಲ್ಲಿ ಎಷ್ಟು ಪ್ರಬಲವಾಗಿದೆ ಎಂಬುದನ್ನು ಈ ವರದಿ ಸ್ವಯಂವ್ಯಕ್ತಗೊಳಿಸುತ್ತದೆ.

ಸಹಿಸಂಗ್ರಹಣದ ಭರಾಟೆ

ಸಹಿಸಂಗ್ರಹಣ ಕಾರ್ಯ ಬಿರುಸಿನಿಂದ ಸಾಗಿದ್ದು ಈವರೆಗೆ ನೂರು ಮಂದಿಗೂ ಹೆಚ್ಚು ಸಹಿಹಾಕಿದ್ದಾರೆಂದು ವರದಿ ತಿಳಿಸುತ್ತದೆ. ಶಾಸನಸಭಾ ಸದಸ್ಯರುಗಳು ಮತ್ತು ವಿಧಾನ ಪರಿಷತ್ತಿನ ಸದಸ್ಯರೂ ಸೇರಿ 180 ಮಂದಿ ಕಾಂಗ್ರೆಸ್ ಸದಸ್ಯರಿದ್ದಾರೆ. ಈ ಸಹಿಸಂಗ್ರಹಣ ಈ ಬಾರಿ ವಿಚಿತ್ರವಾಗಿ ನಡೆಯುತ್ತಿದೆಯೆಂದು ತಿಳಿದುಬಂದಿದೆ. ನಿಜಲಿಂಗಪ್ಪನವರ ವಿರೋಧವಾಗಿಯೂ ಹಾಗೂ ಸಾಹುಕಾರ ಚನ್ನಯವರ ವಿರೋಧವಾಗಿಯೂ ಒಟ್ಟಿಗೆ ಸಹಿಸಂಗ್ರಹವಾಗುತ್ತಿದೆಯೆಂದೂ ಮುಂದೆ ನಾಯಕರಾರು ಎಂಬ ಪ್ರಶ್ನೆ ಇತ್ಯರ್ಥವಾಗಿಲ್ಲವೆಂದೂ ತಿಳಿದುಬಂದಿದೆ. ಉತ್ತರ ಕರ್ನಾಟಕದ ಅಂಬಲಿಯವರ ಹೆಸರೂ, ಜತ್ತಿಯವರ ಹೆಸರೂ ಮತ್ತೆ ಹನುಮಂತಯ್ಯನವರ ಹೆಸರೂ ಕೇಳಿಬರುತ್ತಿದೆ. ಕೆಲವು ಮಂದಿ ಮಂತ್ರಿಮಂಡಲ ಉರುಳುವುದಿಲ್ಲವೆಂದೂ ಭಿನ್ನಾಭಿಪ್ರಾಯಕ್ಕೆ ತೇಪೆ ಹಾಕಲು ಮಂತ್ರಿಮಂಡಲ ಪುನರ್ರಚನೆಯಾದೀತೆಂದೂ ಹೇಳುತ್ತಿದ್ದಾರೆ. ಮಂತ್ರಿಮಂಡಲದ ಮೇಲೆ ಅವಿಶ್ವಾಸಕ್ಕೆ ಸ್ಪಷ್ಟವಾದ ಆರೋಪವೇನನ್ನೂ ಮಾಡದೆ ಇದ್ದರೂ, ನಿಜಲಿಂಗಪ್ಪನವರ ಸರಕಾರ ಅಸಮರ್ಥವಾಗಿದೆಯೆಂದು ಆರೋಪಿಸಲಾಗಿದೆ.

ನಿಜಲಿಂಗಪ್ಪನವರ ಪ್ರಲಾಪ

ನಿಜಲಿಂಗಪ್ಪನವರು ಈ ಅವಿಶ್ವಾಸ ನಿರ್ಣಯದ ಧಾಳಿಯಲ್ಲಿ ಅಸಹಾಯಕರಾಗಿದ್ದಾರೆ. ಅದನ್ನು ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತನಾಡುತ್ತ ಬಹಿರಂಗವಾಗಿ ಇದನ್ನು ವ್ಯಕ್ತಗೊಳಿಸಿದ್ದಾರೆ. ತಾವೇನೂ ಅಧಿಕಾರಕ್ಕೆ ಅಂಟಿಕೊಂಡಿರಬೇಕೆಂದು ಬಯಸುವುದಿಲ್ಲವೆಂದೂ, ಬಹುಮತದ ಅಭಿಪ್ರಾಯಕ್ಕೆ ತಾವು ತಲೆಬಾಗುವುದಾಗಿಯೂ ತಿಳಿಸಿದ್ದಾರೆ. ಕಾಂಗ್ರೆಸ್ ಹೈಕಮಾಂಡಿನೊಂದಿಗೆ ನಿತ್ಯವೂ ಟ್ರಂಕ್‌ಕಾಲು ಮಾಡಿ ವರದಿ ಸಲ್ಲಿಸುತ್ತಿದ್ದಾರೆ.

ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆಯಾದೀತೆ ಇಲ್ಲವೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಮಾರ್ಚ್ 24ರಂದು ಸೇರಲಿರುವ ಕಾಂಗ್ರೆಸ್ ಶಾಸನಸಭಾ ಸದಸ್ಯರಲ್ಲಿ ಸಭೆಯ ಈ ವಿಷಯವು ಬರಲಿದೆ. ಈಗ ತಾನೆ ಬಂದಿರುವ ವರದಿಗಳಂತೆ ಕಾಂಗ್ರೆಸ್ ಹೈಕಮಾಂಡ್ ಅವಿಶ್ವಾಸ ನಿರ್ಣಯಕ್ಕೆ ಅನುಮತಿಯಿಯಾಯುವುದಿಲ್ಲವೆಂದು ತಿಳಿದುಬರುತ್ತದೆ. ಮುಂದೆ ಯಾವ ರೀತಿಯಲ್ಲಿ ಪರಿಸ್ಥಿತಿಯು ಬೆಳೆಯುವುದೆಂಬುದರ ಮೇಲೆ ನಿಜಲಿಂಗಪ್ಪನವರು ಕಾಲ ತಳ್ಳುತ್ತಿದ್ದಾರೆ. ಹೈಕಮಾಂಡ್ ಅಡ್ಡಿಬಂದರೂ ಸಹ, ಯಾವ ಬಗೆಯ ಸಮಜಾ

(ಕೊನೇ ಪುಟ ನೋಡಿ)

ಹಿಂದೂಸ್ತಾನ್ ವಿಮಾನ ಕಾರ್ಖಾನೆ ನೌಕರರ ಹೋರಾಟ

ಮ್ಯಾನೇಜ್‌ಮೆಂಟಿನ ದಬ್ಬಾಳಿಕೆ ನೀತಿ

ವಿಮಾನ ಕಾರ್ಖಾನೆ ನೌಕರರು ತಮ್ಮ ಮುಷ್ಕರ ಹೋರಾಟವನ್ನು ಹಿಂತೆಗೆದುಕೊಂಡು ಕೆಲಸಕ್ಕೆ ಹಿಂದಿರುಗಿ ಒಂದು ವಾರವಾಗಿದೆ. ಮ್ಯಾನೇಜ್‌ಮೆಂಟಿನೊಂದಿಗೆ ಸಂಧಾನ ನಡೆಸಿ, ಪ್ರಶ್ನೆಗಳನ್ನು ಇತ್ಯರ್ಥಗೊಳಿಸುವ ಸಲುವಾಗಿ ಉತ್ತಮ ವಾತಾವರಣವನ್ನು ಕಲ್ಪಿಸುವ ದೃಷ್ಟಿಯಿಂದ ನೌಕರರ ಸಂಘವು ಮುಷ್ಕರ ಹೋರಾಟವನ್ನು ಹಿಂತೆಗೆದುಕೊಂಡಿತು. ಮ್ಯಾನೇಜ್‌ಮೆಂಟಿನವರು ಸಂಧಾನ ನಡೆಸಿ, ಒಪ್ಪಂದಕ್ಕೆ ಬರುವುದರ ಬದಲಾಗಿ ಹಗೆತನ ತೀರಿಸುವ ಧೋರಣೆಯನ್ನನ್ನು ಸರಿಸುತ್ತಿವೆ. ಈಗಾಗಲೇ ಸುಮಾರು 300 ಮಂದಿ ನೌಕರರನ್ನು ಕೆಲಸದಿಂದ ಸಸ್ಪೆಂಡ್ ಮಾಡಲಾಗಿದೆ. ನೌಕರರ ನಿಜವಾದ ಪ್ರತಿನಿಧಿಗಳೊಂದಿಗೆ ಸಂಧಾನ ನಡೆಸಲು ಜನರಲ್ ಮ್ಯಾನೇಜರ್ ಆದ ಶ್ರೀನಾಗೇಶ್‌ರವರು ನಿರಾಕರಿಸಿದ್ದಾರೆ. ನೌಕರರ ಸಂಘದವರು ಸಂಧಾನಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಕಾರ್ಖಾನೆಯಲ್ಲಿ ನೌಕರರ ನಡುವೆ ಅತೃಪ್ತಿ ಹೆಚ್ಚಾಗಿದ್ದು, ಪ್ರಕ್ಷುಬ್ಧ ವಾತಾವರಣ ಮುಂದುವರಿಯುತ್ತಿದೆ.

ಸಂಘದ ಹಂಗಾಮಿ ಕಾರ್ಯದರ್ಶಿ ಡೇನಿಯಲ್ ಮತ್ತು ಉಪಕಾರ್ಯದರ್ಶಿ ಕೃಷ್ಣಮೂರ್ತಿ ಮತ್ತಿತರರ ಬಿಡುಗಡೆ ಇನ್ನೂ ಆಗಿಲ್ಲ. ಅವರನ್ನು ಜಾಮೀನಿನ ಮೇಲೆ ಹೊರಕ್ಕೆ ತರಲು ಹೈಕೋರ್ಟಿಗೆ ಅಪೀಲು ಹೋಗುವುದಾಗಿ ತಿಳಿದುಬಂದಿದೆ. ಪೋಲೀಸು ಕೇಸುಗಳನ್ನು ಹೊಸದಾಗಿ ಮತ್ತೆ ಹಾಕಲಾಗುತ್ತಿದೆ. ಪೋಲೀಸು ಕೇಸುಗಳನ್ನು ಹಿಂತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಮನವಿಯನ್ನು ಸಲ್ಲಿಸಲಾಗಿದೆ.

ಇದೇ ತಿಂಗಳ 19ನೇ ತಾರೀಖಿನಂದು ನಗರದ ಹೊರಗೆ ಕೊಕ ಮಾರ್ತಹಳ್ಳಿಯಲ್ಲಿ ನಡೆದ ಸಂಘದ ಸರ್ವ ಸದಸ್ಯರ ಸಭೆಯು ಪರಿಸ್ಥಿತಿಯನ್ನು ಪರಿಶೀಲಿಸಿ, ಅಧ್ಯಕ್ಷ ಲೂಯಿಸ್‌ವರಿಗೆ, ಸಂಧಾನ ಸಮಿತಿಯೊಂದನ್ನು ರಚಿಸಿ ಮ್ಯಾನೇಜ್‌ಮೆಂಟಿನೊಂದಿಗೆ ಮಾತುಕತೆ ಆರಂಭಿಸಬೇಕೆಂದೂ, ನೂತನ ಕಾರ್ಯಕಾರೀ ಸಮಿತಿಯೊಂದನ್ನು ರಚಿಸಬೇಕೆಂದೂ ಆದೇಶವೀಯುವ ನಿರ್ಣಯವನ್ನು ಮಾಡಲಾಗಿದೆ.

ಈ ಮಧ್ಯೆ ಮ್ಯಾನೇಜ್‌ಮೆಂಟಿನ ಕೈಯಾಳುಗಳಾಗಿ ಕೆಲಸಮಾಡುತ್ತಿರುವ ಸುಂದರಂ ಮತ್ತು ಕಾರ್ಯದರ್ಶಿ ವಿಶ್ವನಾಥ್‌ರವರು ತಮ್ಮ ಚೇಲರನ್ನು ಕಟ್ಟಿಕೊಂಡು ಹೊಸ ಕಾರ್ಯಕಾರಿ ಸಮಿತಿ ರಚಿಸಿರುವುದಾಗಿ ಘೋಷಿಸಿ, ತಮ್ಮ ವಿದ್ರೋಹ ನೀತಿಯನ್ನು ಮುಂದುವರಿಸುತ್ತಿದ್ದಾರೆ.

ವಿಮಾನ ಕಾರ್ಖಾನೆ ನೌಕರರ ಹೋರಾಟಕ್ಕೆ ಬೆಂಬಲ ಅನೇಕ ಕಡೆಗಳಿಂದ ಬರುತ್ತಿದೆ. ವಿವಿಧ ಸಂಘಗಳವರು ಹೋರಾಟ ನಿಧಿಗೆ ಧಾರಾಳವಾಗಿ ಹಣ ಸಹಾಯ ಮಾಡುತ್ತಿದ್ದಾರೆ. ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ (AITUC) ಹೋರಾಟ ನಿಧಿಗೆ 500 ರೂ.ಗಳನ್ನು ಕಳಿಸಿದೆ. ನೌಕರರ ಸಂಘದ ಹಣವೆಲ್ಲವೂ ಕೋರ್ಟಿನ ವ್ಯವಹಾರದಿಂದಾಗಿ ಬ್ಯಾಂಕಿನಲ್ಲಿ ತೆಗೆಯಲಾರದೆ ಕುಳಿತಿದೆ. ಇದರಿಂದಾಗಿ ದೈನಂದಿನ ಕಾರ್ಯ ನಡೆಸುವುದು ಕಷ್ಟವಾಗಿದೆ.

ನೂತನ ವರ್ಷದ ಶುಭಾಷಯಗಳು

ಶಾಲಿವಾಹನಶಕ 1880ರ ವರ್ಷದ ನೂತನ ವರ್ಷದ ಆರಂಭದ ಶುಭಾಷಯಗಳನ್ನು ಹೃತ್ಪೂರ್ವಕವಾಗಿ 'ಜನಶಕ್ತಿ' ತನ್ನ ಓದುಗರಿಗೆ ಸಲ್ಲಿಸುತ್ತದೆ. ನೂತನ ವರ್ಷದ ಉದಯ ಎಲ್ಲರಿಗೂ ಹರ್ಷವನ್ನು ತರಲಿ ಎಂದು ಹಾರೈಸುತ್ತೇವೆ.

—ಸಂ.

ರಾಷ್ಟ್ರೀಯ - ಅಂತರರಾಷ್ಟ್ರೀಯ ★

ದಂಗೆಕೋರರ ಸರಕಾರಕ್ಕೆ ಅಮೆರಿಕದ ನೆರವು

ಇಂಡೊನೇಶಿಯದಲ್ಲಿ ಕೇಂದ್ರ ಸರಕಾರದ ವಿರುದ್ಧವಾಗಿ ದಂಗೆ ನಡೆಸಿ ಮಧ್ಯಸುಮಾತ್ರದಲ್ಲಿ ಪ್ರತಿಸರಕಾರ ಸ್ಥಾಪಿಸಿರುವ ದಂಗೆಕೋರರಿಗೆ ಅಮೆರಿಕವು ನೆರವು ನೀಡುತ್ತಿದೆ ಎಂದು ತಿಳಿದುಬಂದಿದೆ. ದಂಗೆಕೋರರಿಗೆ ಅಮೆರಿಕದ ಶಸ್ತ್ರಾಸ್ತ್ರಗಳ ಸರಬರಾಜು ನಡೆಯುತ್ತಿದೆ ಎಂದು ಜಕಾರ್ಥದಲ್ಲಿರುವ ಕೇಂದ್ರ ಸರಕಾರದ ವಕ್ತಾರರು ತಿಳಿಸಿದ್ದಾರೆ. ದಂಗೆಕೋರರನ್ನು ಅಡಗಿಸಿ, ಸುಮಾತ್ರವನ್ನು ವಶಪಡಿಸಿಕೊಳ್ಳುವ ಹೋರಾಟದಲ್ಲಿ ತೊಡಗಿರುವ ಇಂಡೊನೇಶಿಯ ಪಡೆಗಳು ವಶಪಡಿಸಿಕೊಂಡಿರುವ ಶಸ್ತ್ರಾಸ್ತ್ರಗಳ ಪೈಕಿ ಅಮೆರಿಕದ ಶಸ್ತ್ರಾಸ್ತ್ರಗಳು ಹೆಚ್ಚಾಗಿವೆ ಎಂದು ತಿಳಿಸಿದ್ದಾರೆ.

ಇಂಡೊನೇಶಿಯ ಸರಕಾರದ ಸ್ವತಂತ್ರವಾದ ವಿದೇಶಾಂಗ ನೀತಿಯನ್ನು, ಶಾಂತಿನೀತಿಯನ್ನು ತಾಳಲಾರದ ಅಮೆರಿಕನ್ ಸಾಮ್ರಾಜ್ಯಶಾಹಿಗಳು ತಮ್ಮ ಕೈಗೊಂಬೆ ಸರಕಾರವನ್ನು ಸ್ಥಾಪಿಸುವ ಯತ್ನ ನಡೆಸುತ್ತಿದ್ದಾರೆ. ಅಧ್ಯಕ್ಷ ಸುಕಾರ್ನೋರವರು ಇತ್ತೀಚಿನ ಹೇಳಿಕೆಯೊಂದರಲ್ಲಿ ದಂಗೆಕೋರರಿಗೆ ವಿದೇಶೀ ಶಸ್ತ್ರಾಸ್ತ್ರಗಳು ಸರಬರಾಜಾಗಿರುವುದನ್ನು ತಿಳಿಸಿ, ಆ ದೇಶಗಳು ನಮ್ಮ ದೇಶದ ಒಳ ವ್ಯವಹಾರದಲ್ಲಿ ಕೈಹಾಕುತ್ತಿರುವುದನ್ನು ಖಂಡಿಸಿದ್ದಾರೆ. ದಂಗೆಕೋರರನ್ನು ಪೂರ್ಣವಾಗಿ ಅಡಗಿಸಲು ಕೇಂದ್ರ ಸರಕಾರ ತೀರ್ಮಾನಿಸಿದೆಯೆಂದು ತಿಳಿಸಿದ್ದಾರೆ.

ದಂಗೆಕೋರರಿಗೆ ಶಸ್ತ್ರಾಸ್ತ್ರಗಳ ಸರಬರಾಜನ್ನು ತಪ್ಪಿಸಲು ಸುಮಾತ್ರ ದ್ವೀಪಕ್ಕೆ ಕೈಹೋಗುವ ಹಡಗುಗಳ ಮೇಲೆ ಪ್ರತಿಬಂಧಕ ಹಾಕಲಾಗಿದೆ. ದಂಗೆಕೋರರ ಈ ಸರಕಾರವನ್ನು ಮಟ್ಟಹಾಕಲು ಇಂಡೊನೇಶಿಯದ ಕೇಂದ್ರ ಸರಕಾರವು ತೆಗೆದುಕೊಂಡಿರುವ ಕ್ರಮಕ್ಕೆ ಜನತೆ ಪೂರ್ಣ ಬೆಂಬಲವಿತ್ತಿದ್ದಾರೆ. ಇಂಡೊನೇಶಿಯದ ರಾಷ್ಟ್ರೀಯ ಪಕ್ಷವೊಂದಾದ ಕಮ್ಯೂನಿಸ್ಟ್ ಪಕ್ಷವು ಸರಕಾರದ ಈ ಕಾರ್ಯಕ್ರಮಕ್ಕೆ ಪೂರ್ಣಬೆಂಬಲವನ್ನಿತ್ತಿದೆ.

ದಂಗೆಕೋರರ ಸರಕಾರದ ನಾಯಕರುಗಳು ಅಮೆರಿಕದ ಬೆಂಬಲವನ್ನು ಕೋರಿದ್ದಾರೆ. ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಡಲ್ಲೆಸ್, ಅಮೆರಿಕ ಸರಕಾರವು ದಂಗೆಕೋರರ ಸರಕಾರಕ್ಕೆ ಮಾನ್ಯತೆಕೊಡುವ ವಿಷಯವನ್ನು ಆಲೋಚಿಸುತ್ತಿದೆ ಎಂದು ಈಗಾಗಲೇ ತಿಳಿಸಿದ್ದಾರೆ. ಇತ್ತೀಚಿಗೆ ಮನಿಲಾದಲ್ಲಿ ನಡೆದ ಸಿಯಾಟೋ ಕೂಟವು ಇಂಡೊನೇಶಿಯದ ಪ್ರಶ್ನೆಯನ್ನು ಕುರಿತು ಚರ್ಚೆ ನಡೆಸಿದೆ. ಇಂಡೊನೇಶಿಯದ ಆಂತರಿಕ ವ್ಯವಹಾರದಲ್ಲಿ ಸಾಮ್ರಾಜ್ಯವಾದಿಗಳ ಹಸ್ತಕ್ಷೇಪವು ಮುಂದುವರಿದಲ್ಲಿ, ವಿಶ್ವಶಾಂತಿಗೇ ಧಕ್ಕೆ ತಗುಲಲಿದೆ. ಇಂಡೊನೇಶಿಯದ ಜನತೆ ಡಚ್ ಸಾಮ್ರಾಜ್ಯವಾದಿಗಳ ವಿರುದ್ಧವಾಗಿ ಹೋರಾಟ ನಡೆಸಿ ಅನುಭವ ಪಡೆದಿದ್ದಾರೆ, ಸಾಮ್ರಾಜ್ಯವಾದಿಗಳ ಈ ಮಧ್ಯೆ ಪ್ರವೇಶವನ್ನು ಅವರು ಇದಿರಿಸಿ, ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ. ದಂಗೆಕೋರರ ಮೇಲೆ ನಡೆಸಲಾಗುತ್ತಿರುವ ಮಿಲಿಟರಿ ಕಾರ್ಯಾಚರಣೆಯು ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ ಮತ್ತು ಇಂಡೊನೇಶಿಯದ ಐಕ್ಯತೆಯು ಭದ್ರಗೊಂಡು, ಅಲ್ಲಿ ಶಾಂತಿ ನೆಲೆಸಲಿ ಎಂದು ಹಾರೈಸುತ್ತೇವೆ.

ಸಿಯಾಟೋ ಕೂಟದಿಂದ ಏಷ್ಯಾದ ಸ್ವತಂತ್ರ ರಾಷ್ಟ್ರಗಳಿಗೆ ವಿಪತ್ತು

ಮನಿಲಾದಲ್ಲಿ ಇತ್ತೀಚಿಗೆ ನಡೆದ ಸಿಯಾಟೋ ಮಿಲಿಟರಿ ಕೂಟದ ಸಭೆಯಲ್ಲಿ ತೆಗೆದುಕೊಳ್ಳಲಾಗಿರುವ ತೀರ್ಮಾನಗಳು ಏಷ್ಯದ ಸ್ವತಂತ್ರ ರಾಷ್ಟ್ರಗಳಿಗೆ ವಿಪತ್ತನ್ನು ಹೆಚ್ಚಿಸಿದೆ. ಸಿಯಾಟೋ ಕೂಟದ ಸಭೆ ಕೂಡಲಿಕ್ಕೆ ಮುನ್ನ ಸೋವಿಯತ್ ಯೂನಿಯನ್ ಈ ಮಿಲಿಟರಿ ಕೂಟದಿಂದ ವಿಶ್ವಶಾಂತಿಗೆ ಆಪತ್ತು ಹೆಚ್ಚಿದೆಯೆಂದೂ, ಏಷ್ಯದ ಪ್ರದೇಶದಲ್ಲಿ ಅಣುಶಸ್ತ್ರಾಸ್ತ್ರಗಳನ್ನು ಒದಗಿಸಿದ್ದೇ ಆದಲ್ಲಿ ವಿಪತ್ತು ಹೆಚ್ಚಾಗುವುದೆಂದೂ ತಿಳಿಸಿ ಎಚ್ಚರಿಕೆಯಿತ್ತಿದೆ. ಏಷ್ಯಾದೇಶದಲ್ಲಿ ಅಣುಶಸ್ತ್ರ ರಹಿತ ಪ್ರದೇಶವನ್ನು ಉಂಟುಮಾಡಬೇಕೆಂದೂ ಸಲಹೆ ಇತ್ತಿದೆ.

ಕಮ್ಯೂನಿಸಮನ್ನು ಎದುರಿಸುವ ಹೆಸರಿನಲ್ಲಿ, 'ಕಮ್ಯೂನಿಸ್ಟರ ಆಕ್ರಮಣ'ವನ್ನು ತಡೆಗಟ್ಟುವ ಹೆಸರಿನಲ್ಲಿ, ಅಮೆರಿಕ ಬ್ರಿಟನ್ ಮತ್ತು ಫ್ರೆಂಚ್ ಸಾಮ್ರಾಜ್ಯವಾದಿಗಳಿಂದ ಪ್ರಚೋದಿತವಾದ ಈ ಸಿಯಾಟೋ ಕೂಟವು ಇತರ ರಾಷ್ಟ್ರಗಳ ಆಂತರಿಕ ವ್ಯವಹಾರದಲ್ಲಿ ಪ್ರವೇಶಿಸುತ್ತಿದೆ. ಮನಿಲಾ ಕೂಟದಲ್ಲಿ ಈ ಬಾರಿ ತೆಗೆದುಕೊಂಡಿರುವ ತೀರ್ಮಾನದಲ್ಲಿ ಈ ಕೂಟದ ಪ್ರದೇಶದಲ್ಲಿ ತನ್ನ ಚಟುವಟಿಕೆಯನ್ನು ಹೆಚ್ಚಿಸಲಾಗುವುದೆಂದು ಹೇಳಲಾಗಿದೆ. ಅತಿ ಮುಖ್ಯವಾದ ಅಂಶವೆಂದರೆ ಸಾಮ್ರಾಜ್ಯವಾದಿಗಳ ಕೈಗೂಸಾದ ಇನ್ನೆರಡು ಆಕ್ರಮಣಕಾರೀ ಕೂಟಗಳಾದ ನ್ಯಾಟೋ ಮತ್ತು ಬಾಗದಾದ್ ಕೌಲಿನೊಂದಿಗೆ ನಿಕಟಸಂಪರ್ಕವನ್ನಿರಿಸಿಕೊಳ್ಳುವುದು. ನ್ಯಾಟೋ, ಸಿಯಾಟೋ ಮತ್ತು ಬಾಗದಾದ್ ಕೂಟಗಳು ಒಂದುಗೂಡಿ ಪರಸ್ಪರ ಕೆಲಸ ಮಾಡಲು ತೀರ್ಮಾನಿಸಿರುವುದು. ಈ ಆಕ್ರಮಣಕಾರೀ ಕೂಟಗಳು ಒಂದಾಗಿ ನಿಕಟ ಸಂಪರ್ಕ ಬೆಳೆಸುವುದು, ವಿಶ್ವಶಾಂತಿಗೆ ಏಷ್ಯಾದ ಸ್ವತಂತ್ರ ರಾಷ್ಟ್ರಗಳಿಗೆ ಭಾರೀ ಆತಂಕವಾಗುವುದು. ಕಮ್ಯೂನಿಸಂಅನ್ನು ಎದುರಿಸುವ ಗುರಿಯನ್ನು ಮುಂದಿಟ್ಟು ಈ ಕೂಟದ ಮೂಲಕ ಸ್ವತಂತ್ರ ರಾಷ್ಟ್ರಗಳನ್ನು ತಮ್ಮ ವಶದಲ್ಲಿರಿಸಿಕೊಳ್ಳುವುದೇ ಸಾಮ್ರಾಜ್ಯವಾದಿಗಳ ಗುರಿಯಾಗಿದೆ. ಸ್ವಾತಂತ್ರ್ಯಪ್ರಿಯ ಏಷ್ಯಾರಾಷ್ಟ್ರಗಳ ಜನತೆಯು ಎಚ್ಚರದಿಂದಿದ್ದು, ಸಾಮ್ರಾಜ್ಯವಾದಿಗಳ ಈ ಯತ್ನವನ್ನು ಮುರಿಯುವುದು ಅತ್ಯಗತ್ಯವಾಗಿದೆ.

ಉತ್ತರ ಕೊರಿಯಾದಿಂದ ಚೀಣೀ ಸ್ವಯಂಸೇವಕರ ವಾಪಸು

ಕೊರಿಯಾ ಯುದ್ಧ ಸಂದರ್ಭದಲ್ಲಿ, ಕೊರಿಯದ ಜನತೆಯ ಸ್ವಾತಂತ್ರ್ಯವನ್ನು ರಕ್ಷಿಸಲು, ಸಾಮ್ರಾಜ್ಯವಾದಿಗಳ ದುರಾಕ್ರಮಣವನ್ನು ಇದಿರಿಸಲು ಹೋರಾಟದಲ್ಲಿ ಸ್ವಯಂಸೇವಕರಾಗಿ, ಕೊರಿಯದ ಜನತೆಯೊಂದಿಗೆ ಕಾದಿದ ಚೀಣೀ ಸ್ವಯಂಸೇವಕರು ಸ್ವದೇಶಕ್ಕೆ ಮರಳುತ್ತಿದ್ದಾರೆ. ಸೌಹಾರ್ದತೆ ಮತ್ತು ತಮ್ಮ ನೆರೆರಾಷ್ಟ್ರದ ಸ್ವಾತಂತ್ರ್ಯ ರಕ್ಷಣೆಗಾಗಿ ಹೋರಾಡಿದ ಸಹಸ್ರಾರು ಚೀಣೀ ಸ್ವಯಂಸೇವಕರುಗಳು, ವರ್ಷಗಳ ನಂತರದಲ್ಲಿ ಸ್ವದೇಶಕ್ಕೆ ಹಿಂತಿರುಗುತ್ತಿದ್ದಾರೆ. ಕೊರಿಯಾದ ಪ್ರಶ್ನೆ ಇನ್ನೂ ಇತ್ಯರ್ಥವಾಗಿಲ್ಲದಿದ್ದರೂ, ಅಮೆರಿಕದ ಚೀಲನಾಗಿ ದಕ್ಷಿಣ ಕೊರಿಯಾದಲ್ಲಿರುವ ಸಿಂಗ್‌ಮನ್-ರೀ ಸರಕಾರವು ಕೊರಿಯಾದ ಒಕ್ಕೂಟಕ್ಕೆ ಅಡ್ಡಿಯಾಗಿದ್ದರೂ, ಕೊರಿಯದ ಜನತೆ ಇತ್ಯರ್ಥಕ್ಕಾಗಿ ಕಾಯುತ್ತಿದ್ದಾರೆ. ಅಪಾರವಾದ ತ್ಯಾಗವನ್ನು ಮಾಡಿ ತಮ್ಮ ನೆರೆರಾಷ್ಟ್ರದ ಸಹೋದರರಿಗಾಗಿ ಹೋರಾಡಿದ ಚೀಣೀ ಸ್ವಯಂಸೇವಕರು ಹಿಂತಿರುಗುತ್ತಿರುವುದು ಮಹತ್ವದ ವಿಷಯವಾಗಿದೆ. ಈಗಾಗಲೇ ಕೊರಿಯದಲ್ಲಿದ್ದ ಪ್ರಥಮ ತಂಡವು ಸ್ವದೇಶಕ್ಕೆ ಮರುಳಿದೆ.

ಜೀವವಿಮಾ ಕಾರ್ಪೊರೇಷನ್ ಅಧಿಕಾರಿಗಳ ಚಟುವಟಿಕೆ ಬಗ್ಗೆ ತನಿಖೆ

ಜೀವ ವಿಮಾ ಕಾರ್ಪೊರೇಷನ್ನಿನ ಅಧಿಕಾರಿಗಳ ಚಟುವಟಿಕೆಗಳ ಕುರಿತು ವಿಚಾರಣೆ ನಡೆಸಲು ಸರಕಾರವು ತ್ರಿಮೂರ್ತಿಗಳ ಸಮಿತಿಯೊಂದನ್ನು ನೇಮಿಸಿದೆ. ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ಜಸ್ಟಿಸ್ ವಿವಿಯನ್ ಬೋಸ್‌ರವರ ನೇತೃತ್ವದಲ್ಲಿ ರಚಿತವಾಗಿರುವ ಈ ಸಮಿತಿಯು ಮುಂಧ್ರಾರ ಕಂಪೆನಿಗಳ ಷೇರುಗಳನ್ನು ಜೀವವಿಮಾ ಕಾರ್ಪೊರೇಷನ್ ಕೊಂಡುಕೊಂಡಿದ್ದಲ್ಲಿ ಎಚ್. ಎಂ. ಪಟೇಲ್, ಜಿ. ಆರ್. ಕಾಮತ್ ಮೊದಲಾದವರ ಪಾತ್ರವನ್ನು ವಿಚಾರಣೆ ನಡೆಸುವುದು. ಚಾಗ್ಲಾ! ಕಮಿಶನ್‌ನ ವರದಿಯು ಈ ವಿಚಾರಣೆಗೆ ಆಧಾರವಾಗಿರುವುದು. ಈ ವಿಚಾರಣೆಯು ಗುಪ್ತವಾಗಿ ನಡೆಯುವುದು. ವಿಚಾರಣೆ ಸಂದರ್ಭದಲ್ಲಿ ಈ ಅಧಿಕಾರಿಗಳು ತಮ್ಮ ಸ್ಥಾನಗಳಲ್ಲಿರುವರೇ ಎಂದು ಕಮ್ಯೂನಿಸ್ಟ್ ಸದಸ್ಯರಾದ ಎಸ್. ಎ. ಡಾಂಗೆಯವರ ಪ್ರಶ್ನೆಗೆ ಉತ್ತರವೀಯುತ್ತ ಪಂಡಿತ ನೆಹರೂರವರು ಪಟೇಲರು ಈಗಾಗಲೇ ರಜೆಯಲ್ಲಿರುವರೆಂದೂ ಕಾಮತ್‌ರವರೂ ರಜೆಯಲ್ಲಿ ಹೋಗುವರೆಂದೂ, ಒಟ್ಟಿನಲ್ಲಿ ಅವರು ಅಧಿಕಾರ ನಡೆಸುವುದಿಲ್ಲವೆಂದೂ ತಿಳಿಸಿದ್ದಾರೆ. ಪಂಡಿತ ನೆಹರೂರವರು ಈ ವಿಷಯವನ್ನು ಬಜೆಟ್ ಚರ್ಚೆಗೆ ಉತ್ತರ ಕೊಡುತ್ತಾ ಹೇಳಿದ್ದಾರೆ.

ಕೇರಳ ವಿದ್ಯಾ ಮಸೂದೆ ಸುಪ್ರೀಂ ಕೋರ್ಟಿಗೆ

ಕೇರಳ ವಿಧ್ಯಾ ಮಸೂದೆಯನ್ನು ಸುಪ್ರೀಂ ಕೋರ್ಟಿನ ಅಭಿಮತ ಪಡೆಯಲು ಇದೀಗ ಒಪ್ಪಿಸಲಾಗಿದೆ. ಆಕ್ಟೋಬರ್ 4, 1957 ರಂದು ರಾಷ್ಟ್ರಾಧ್ಯಕ್ಷರ ಅಪ್ಪಣೆ ಪಡೆಯಲು ಕೇರಳ ವಿಧ್ಯಾ ಮಸೂದೆಯನ್ನು ತಲುಪಿಸಲಾಗಿತ್ತು. ಕೆಲವು ತಿಂಗಳ ಹಿಂದೆ ಮಸೂದೆಯನ್ನು ಸುಪ್ರೀಂ ಕೋರ್ಟಿನ ಅಭಿಮತ ಪಡೆಯಲು ಒಪ್ಪಿಸುವುದಾಗಿ ಕೇಂದ್ರ ಸರಕಾರದ ವಕ್ತಾರರು ತಿಳಿಸಿದ್ದರು. ಲೋಕ ಸಭೆಯ ಪ್ರಸ್ತುತ ಅಧಿವೇಶನದಲ್ಲಿ ಈ ಬಗ್ಗೆ ಹನ್ನೊಂದು ಮಂದಿ ಸದಸ್ಯರುಗಳ ಪ್ರಶ್ನೆಯನ್ನು ಕಳಿಸಿದ್ದರು. ಗೃಹಸಚಿವ ಪಂತ್‌ರವರು ಪ್ರಶ್ನೆಗೆ ಉತ್ತರವೀಯುತ್ತ, ನ್ಯಾಯಾಂಗ ಸಚಿವರು ಮತ್ತು ಆಟರ್ನಿ ಜನರಲ್‌ರವರು, ಕೇರಳ ವಿಧ್ಯಾ ಮಸೂದೆಯ ಕೆಲವು ಭಾಗಗಳು ರಾಜ್ಯಾಂಗ ಘಟನೆಯನ್ನು ಮೀರುವುದೆಂಬ ಅಭಿಪ್ರಾಯ ಪಟ್ಟಿರುವರೆಂದೂ, ಆದರಿಂದಾಗಿ ಅದನ್ನು ಸುಪ್ರೀಂ ಕೋರ್ಟಿಗೆ ಒಪ್ಪಿಸಲಾಗಿದೆಯೆಂದು ತಿಳಿಸಿದ್ದಾರೆ. ಕೆಲವು ತಿಂಗಳ ಹಿಂದೆ ಪ್ರಧಾನಿ ನೆಹರೂರವರು ವಿಧ್ಯಾ ಮಸೂದೆಯ ಮೇಲೆ ಸುಪ್ರೀಂ ಕೋರ್ಟಿನ ಅಭಿಮತ ಪಡೆಯಲು ತೀರ್ಮಾನಿಸಿರುವುದು ಇಲ್ಲದ ವ್ಯವಹಾರವನ್ನು ತಪ್ಪಿಸಲಿಕ್ಕಾಗಿ ಎಂದು ತಿಳಿಸಿದ್ದರಲ್ಲವೆ ಎಂಬ ಪ್ರಶ್ನೆಗೆ ಉತ್ತರ ಕೊಡುತ್ತ, ಹಾಗೇನಿಲ್ಲವೆಂದೂ, ಘಟನೆಯನ್ನು ಮೀರಿ ಕೆಲವು ಅಂಶಗಳಿವೆಯೇ ಎಂಬುದೇ ಪ್ರಾಧಾನ್ಯವಾಗಿರುವ ಅಂಶವೆಂದು ತಿಳಿಸಿ, ಬೇಕಿದ್ದಲ್ಲಿ ರಾಷ್ಟ್ರಾಧ್ಯಕ್ಷರ ಮನ್ನಣೆಯನ್ನೇ ತಿರಸ್ಕರಿಸಬಹುದಾಗಿತ್ತೆಂದೂ ತಿಳಿಸಿದ್ದಾರೆ. ಆಂಧ್ರ ವಿಧ್ಯಾಭ್ಯಾಸ ಮಸೂದೆ ಇದೇ ರೀತಿಯಲ್ಲಿಲ್ಲವೇ ಎಂಬ ಪ್ರಶ್ನೆಗೆ ಅವರು ಇದ್ದರೂ ಇದ್ದೀತು ಅಥವ ಇಲ್ಲ ಎಂದು ಜಾರಿಗೊಳ್ಳುವ ರೀತಿ ಹೇಳಿದ್ದಾರೆ.

ಕೇರಳದ ವಿಧ್ಯಾ ಮಸೂದೆಯನ್ನು ತಯಾರಿಸಿದಾಗ, ನಂತರದಲ್ಲಿ ಮತ್ತು ಶಾಸನ ಸಭೆಯಲ್ಲಿ ಮಂಡಿಸುವ ಮುನ್ನ ಕೇಂದ್ರ ಸರಕಾರದ ವಿಧ್ಯಾ ಇಲಾಖೆಯೊಂದಿಗೆ ನ್ಯಾಯಾಂಗ ಇಲಾಖೆಯೊಂದಿಗೆ ದೀರ್ಘ ಚರ್ಚೆ ನಡೆದು ಆ ನಂತರವೇ ಅನುಮೋದನೆಯಾದದ್ದು. ರಾಜ್ಯ ಸರಕಾರದ ಮಸೂದೆಗಳೆಲ್ಲವಕ್ಕು ಸಾಮಾನ್ಯವಾಗಿ ರಾಷ್ಟ್ರಾಧ್ಯಕ್ಷರ ಮನ್ನಣೆ ಶೀಘ್ರವಾಗಿ ದೊರಕಿದೆ. ಕೇರಳ ವಿಧ್ಯಾ ಮಸೂದೆಯೊಂದನ್ನೇ ಈವರೆಗೆ ಸುಪ್ರೀಂ ಕೋರ್ಟಿಗೆ ಒಪ್ಪಿಸಲಾಗಿರುವುದು. ಲೋಕ ಸಭೆಯಲ್ಲಿ ಈ ಬಗ್ಗೆ ಸದಸ್ಯರು ಸರಕಾರದ ನೀತಿಯ ಕುರಿತು ಅನೇಕ ಪ್ರಶ್ನೆಗಳನ್ನು ಹಾಕಿದ್ದಾರೆ.

ಮಾರ್ಚ್ 27 – ಕಾರ್ಮಿಕರ ರಾಷ್ಟ್ರೀಯ ಪ್ರದರ್ಶನ

ಎಸ್. ಎ. ಡಾಂಗೆ

'ಇಂಟಕ್' ಒಂದನ್ನು ಬಿಟ್ಟು, ಭಾರತದ ಸಂಘಟಿತ ಕಾರ್ಮಿಕ ವರ್ಗದ ಎಲ್ಲಾ ಪ್ರತಿನಿಧಿಗಳು ದೆಹಲಿಯಲ್ಲಿ 23 ಫೆಬ್ರವರಿ 1958ರಂದು ನಡೆದ ಸಭೆಯಲ್ಲಿ ಭಾಗವಹಿಸಿದ್ದರು.

ಎಚ್.ಎಮ್.ಎಸ್. ಈ ಸಭೆಯನ್ನು ಕರೆದಿತ್ತು. ಬೆಂಗಳೂರಿನಲ್ಲಿ ನಡೆದ ಹಿಂದ್ ಮಜದೂರ್ ಸಭೆಯ 6ನೇ ವಾರ್ಷಿಕ ಸಮಾವೇಶವು, ಪ್ರಧಾನವಾದ ಕೇಳಿಕೆಗಳ ಚಾರ್ಟರಿನ ಹಿಂದೆ ದೇಶದ ಎಲ್ಲಾ ಕಾರ್ಮಿಕ ವರ್ಗ (ಯಾವುದೇ ರಾಜಕೀಯ ಹಾಗೂ ಟ್ರೇಡ್ ಯೂನಿಯನ್ ಸಂಬಂಧವಿರಲಿ) ವನ್ನು ಒಂದುಗೂಡಿಸಿ, ಹೋರಾಟ ನಡೆಸಲು ಇಂಥಾ ಒಂದು ಸಭೆಯನ್ನು ಕರೆಯಬೇಕೆಂದು ನಿರ್ದೇಶಿಸಿತ್ತು. ಹಾಗೆಯೇ ಈ ಕೇಳಿಕೆಗಳ ಚಾರ್ಟರನ್ನು ಮುಂಡಿಸಿಯೂ ಇತ್ತು.

ಕಾರ್ಮಿಕ ವರ್ಗದ ಸರ್ವಸಾಮಾನ್ಯ ಸಿದ್ಧತೆ ಮತ್ತು ಇದಕ್ಕೆ ಹೊಂದಿಕೊಂಡು ನೇರವಾದ ಕಾರ್ಯಕ್ರಮ ಹಾಕಿಕೊಳ್ಳಲು ಎಚ್. ಎಮ್. ಎಸ್. ನಿರ್ದೇಶಿಸಲ್ಪಟ್ಟಿತು. ಇವರ ಪ್ರಥಮ ಅಂಗವಾಗಿ ಅಖಿಲ ಭಾರತ ಸಾಂಕೇತಿಕ ಮುಷ್ಕರ ಹೂಡಲು ಕರೆ ಕೊಡಬೇಕೆಂದಾಗಿತ್ತು.

ತದ್ರೀತಿ, ಜನವರಿ 12ರಂದು ಎಚ್. ಎಂ. ಎಸ್.ನ ಕಾರ್ಯಕಾರಿ ಸಮಿತಿಯು ಸಭೆಸೇರಿ, ಎ. ಐ. ಟಿ. ಯು. ಸಿ. ಮತ್ತು ಯು. ಟಿ. ಯು. ಸಿ. ಈ ಬಗ್ಗೆ ತಮ್ಮೊಡನೆ ಚರ್ಚಿಸಬೇಕೆಂದು ಕೋರಿತು.

ಎಚ್.ಎಂ.ಎಸ್. ಎ.ಐ.ಟಿ.ಯು.ಸಿ. ಅಲ್ಲದೆ, ಇತರ ಆರು ಅಖಿಲ ಭಾರತ ಟ್ರೇಡ್ ಫೆಡರೇಷನ್‌ಗಳು ಈ ಸಭೆಯಲ್ಲಿ ಅಧಿಕೃತವಾಗಿಯೋ ಅಥವಾ ಪ್ರೇಕ್ಷಕರಾಗಿಯೋ ಭಾಗವಹಿಸಿದುವು. ಯು.ಟಿ.ಯು. ಸಿ.ಯು ತನ್ನ ಸಮ್ಮತಿಯನ್ನು ಸೂಚಿಸಿ ಪತ್ರ ಬರೆದಿತ್ತು.

ಕಾರ್ಮಿಕ ಸಂಘಗಳ ಮೂರು ರಾಷ್ಟ್ರೀಯ ಕೇಂದ್ರಗಳು ಮತ್ತು 6 ರಾಷ್ಟ್ರೀಯ ಫೆಡರೇಷನ್‌ಗಳು ಭಾಗವಹಿಸಿದ ಈ ಸಭೆಯು ಭಾರತದ ಸಂಘಟಿತ ಕಾರ್ಮಿಕ ವರ್ಗದ ಬಹುಭಾಗವನ್ನು ಪ್ರತಿನಿಧೀಕರಿಸುತ್ತದೆಂಬುದನ್ನು ತಿಳಿಯಬಹುದು.

ಇಂಥಾ ಒಂದು ಸಭೆಗೆ ನೇರವಾದ ಕಾರ್ಯಕ್ರಮಕ್ಕಾಗಿ ಕಾರ್ಮಿಕ ವರ್ಗ ತಯಾರಿದೆಯೋ ಇಲ್ಲವೇ ಎಂಬುದನ್ನು ತಿಳಿಯಲು ಕಷ್ಟವಾಗದು. ಆದರೂ ಪ್ರಥಮವಾಗಿ ಅಖಿಲ ಭಾರತ ಮಟ್ಟದಲ್ಲಿ ಒಂದು ಸಾಂಕೇತಿಕ ಮುಷ್ಕರಕ್ಕೆ ಕರೆ ಕೊಡುವುದು ಅಷ್ಟೊಂದು ಸುಲಭ ಸಾಧ್ಯವಲ್ಲ.

ಕೇಳಿಕೆಗಳು ಇವೆ, ಅತೃಪ್ತಿ ಇದೆ, ಆರ್ಥಿಕ ಕ್ಷೇತ್ರದಲ್ಲಿ ಬಂಡವಾಳಶಾಹೀ ನಿರಂಕುಶಾಧಿಕಾರವಿದೆ, ಇದಕ್ಕೆ ಸರ್ಕಾರದ ನೀತಿಯೂ ಬೆಂಬಲಕಾರಿಯಾಗಿದೆ; ಇದನ್ನು ವಿರೋಧಿಸಲು ಕಾರ್ಮಿಕರು ಕಾರ್ಯೋನ್ಮುಖರಾಗಲೇಬೇಕು.

ಆದರೆ ಇವಿಷ್ಟೇ, ರಾಷ್ಟ್ರೀಯ ಮಟ್ಟದಲ್ಲಿ ಯಶಸ್ವಿಯಾಗಿ ಸಾಂಕೇತಿಕ ಮುಷ್ಕರವನ್ನು ನಡೆಸಲು ಸಾಧ್ಯಗೊಳಿಸದು.

ಕಾರ್ಮಿಕರ ಮೇಲೆ ಧಾಳಿಗಳೂ ಮುಂದುವರಿಯುತ್ತಿದ್ದರೂ, ಅವರ ಪ್ರತಿಭಟನೆಯಿಂದಾಗಿ ಸರಕಾರ ಮತ್ತು ಮಾಲಿಕರು ನ್ಯಾಯವನ್ನು ಮನಗಂಡು ಕೆಲವಾದರೂ ಕೇಳಿಕೆಗಳನ್ನು ಮಾನ್ಯ ಮಾಡುವಂತೆ ಬಲಾತ್ಕರಿಸಲ್ಪಟ್ಟಿದ್ದಾರೆ.

ಈ ಪರಿಸ್ಥಿತಿಯಲ್ಲಿ, ಕೇಳಿಕೆಗಳ ಚಾರ್ಟರಿನ ಬೆಂಬಲವಾಗಿ, ಒಂದು ರಾಷ್ಟ್ರೀಯ ಪ್ರದರ್ಶನಕ್ಕಾಗಿ, ಪ್ರಪ್ರಥಮವಾಗಿ ಕಾರ್ಮಿಕರನ್ನು, ಪರಸ್ಪರ ಸಮ್ಮತದ ಸಂಯುಕ್ತ ವೇದಿಕೆಯ ಮೇಲೆ ಒಂದುಗೂಡಿಸುವುದು ಉತ್ತಮವಲ್ಲವೆ? ಈ ರೀತಿಯ ದೇಶಾದ್ಯಂತ ಪ್ರದರ್ಶನ, ಸರಕಾರ ಮತ್ತು ಮಾಲಿಕರುಗಳನ್ನು ಒಂದು ದುಂಡು ಮೇಜಿನ ಪರಿಷತ್ತನ್ನು ಕರೆಯಲು ಒತ್ತಾಯಿಸಿ, ಕೆಲವು ಪ್ರಧಾನ ಸಮಸ್ಯೆಗಳನ್ನಾದರೂ ರಾಷ್ಟ್ರೀಯ ಮಟ್ಟದಲ್ಲಿ ಪರಿಹರಿಸಲು ಸಾಧ್ಯವಾಗಿಸದೆ?

ದೆಹಲಿ ಸಭೆಯಲ್ಲಿ ಈ ಪ್ರಶ್ನೆಗಳನ್ನು ಎ.ಐ.ಟಿ.ಯು.ಸಿ.ಯು ಮುಂಡಿಸಿದರು. ಆದರೆ ಎಚ್.ಎಂ.ಎಸ್.ನ ಕಾಮ್ರೇಡುಗಳು ಬಿಕ್ಕಟ್ಟಿನಲ್ಲಿ ಸಿಲುಕಿದರು. ಅವರ ಸಮಾವೇಶ ಪ್ರಥಮವಾಗಿ ಸಾಂಕೇತಿಕ ಮುಷ್ಕರ ನಡೆಯಬೇಕೆಂದು ಬಯಸಿತ್ತು. ಎರಡನೆಯದಾಗಿ ಮುಂದೇನು ಮಾಡಬೇಕೆಂದು ಯಾರಿಗೂ ತಿಳಿಯದು. ಕಟ್ಟಕಡೆಗೆ ಸತರ್ಕವಾಗಿ ಚರ್ಚೆ ನಡೆದು ಸಂಯುಕ್ತವಾಗಿ ಕಾರ್ಯೋನ್ಮುಖರಾಗಲು ಮತ್ತು ಈ ದಿಶೆಯಲ್ಲಿ **ಮಾರ್ಚಿ 27**ರಂದು ರಾಷ್ಟ್ರೀಯ ಮಟ್ಟದಲ್ಲಿ ಸಂಯುಕ್ತವಾದ ಪ್ರದರ್ಶನ ನಡೆಸಲು ಸರ್ವರೂ ಒಪ್ಪಿದರು. ಒಂದು ಪುನರ್ವಿಮರ್ಶಿತ ಕೇಳಿಕೆಗಳ ಚಾರ್ಟರನ್ನು ಸಿದ್ಧಪಡಿಸಲಾಯಿತು ಮತ್ತು ಕ್ರಿಯಾ ಸಮಿತಿಯನ್ನು ರಚಿಸಲಾಯಿತು.

ದೆಹಲಿಯಲ್ಲಿ ಲೋಕ ಸಭೆಗೂ ರಾಜ್ಯಗಳಲ್ಲಿ ವಿಧಾನ ಸಭೆಗಳಿಗೂ ಮೆರವಣಿಗೆ ತೆಗೆದುಕೊಂಡು ಹೋಗಿ ಕೇಳಿಕೆಗಳ ಚಾರ್ಟರನ್ನು ನೀಡಬೇಕೆಂಬುದು ಈ ಪ್ರದರ್ಶನದ ಒಂದು ರೂಪವಾಗಿದೆ.

ಈ ಪ್ರದರ್ಶನ, ಕೇಳಿಕೆಗಳ ಚಾರ್ಟರು ಇವೆಲ್ಲಾ ಅಯಶಸ್ವಿಯಾದಲ್ಲಿ, ಮುಂದಿನ ಸಾರ್ವತ್ರಿಕ ಸಾಂಕೇತಿಕ ಮುಷ್ಕರ ಇವುಗಳ ಬಗ್ಗೆ ಎ.ಐ.ಟಿ.ಯು.ಸಿ.ಯ ನಿಲುವೇನು ಎಂದು ಕೇಳಲಾಗುತ್ತಿದೆ.

ಎ.ಐ.ಟಿ.ಯು.ಸಿ.ಯ ಕಾರ್ಮಿಕ ಸಂಘಟನೆಗಳಿಗೆ ಇವಿಷ್ಟು ಸ್ಪಷ್ಟವಾಗಿದೆ: ಕಾರ್ಮಿಕ ವರ್ಗದ ಪ್ರಧಾನ ಕೇಳಿಕೆಗಳಾದ ವೇತನ, ಹಾಗೂ ಸಾಮಾಜಿಕ ಭದ್ರತೆ ಪ್ರಶ್ನೆ ಮತ್ತು ಟ್ರೇಡ್ ಯೂನಿಯನ್ ಹಕ್ಕು ಇವುಗಳು ಇನ್ನೂ ಮಾಲಿಕರಿಂದಲೂ ಸರಕಾರದಿಂದಲೂ ಪ್ರತಿರೋಧಿಸಲ್ಪಡುತ್ತದೆ. ಕಳೆದ ಬಾರಿ ಲೋಕ ಸಭೆಯಲ್ಲಿ ಸರಕಾರದ ಕಾರ್ಮಿಕ ನೀತಿಯನ್ನು ಎತ್ತಿ, ಕಾರ್ಮಿಕರ ಪ್ರಧಾನವಾದ ಕೇಳಿಕೆಗಳ ಪ್ರಾಮುಖ್ಯತೆಯನ್ನೂ ಅವಶ್ಯಕತೆಯನ್ನೂ ತಿಳಿಸಲಾಗಿದೆ.

ಅಂಚೆ ಮತ್ತು ತಂತಿ ನೌಕರರ ಮುಷ್ಕರದಿಂದ ಉದ್ಭವಿಸಿದ ಪ್ರಕ್ಷುಬ್ಧ ಪರಿಸ್ಥಿತಿ ಮತ್ತು ಭಿಂಗಿ ಕಾಲೊನಿಯಲ್ಲಿ ಹಾಗೂ ಇನ್ನಿತರ ಕಡೆಯಲ್ಲಿ ನಡೆದ ಗೋಲೀಬಾರಿನ ಬಗ್ಗೆ ಸರಕಾರವನ್ನು ಪ್ರಶ್ನಿಸಲಾಗಿದೆ. ಈ ಪ್ರಕ್ಷುಬ್ಧ ಪರಿಸ್ಥಿತಿಯು ಬೆಳೆಯಲು ಸರಕಾರ ಅವಕಾಶ ಕೊಟ್ಟು, ಕಾರ್ಮಿಕರು ಮುಷ್ಕರ ಹೂಡುವಂತೆ ಪರೋಕ್ಷವಾಗಿ ಬಲಾತ್ಕರಿಸುವುದೇಕೆ? ಕಾರ್ಮಿಕರ ಕೇಳಿಕೆಗಳಾದರೋ ಸರ್ವಸಾಮಾನ್ಯವಾಗಿ ಎಲ್ಲಾ ಪಕ್ಷಗಳಿಗೆ ಸಮ್ಮತವಾಗಿದ್ದೂ, ಕಾರ್ಮಿಕ ಮಸೂದೆಗಳೇ ಇವುಗಳನ್ನು ಇತ್ತಿರುವಾಗ, ಸರಕಾರದ ಕಾರ್ಮಿಕ ನೀತಿಯೇ ಇವನ್ನು ನಿರೂಪಿಸಿರುವಾಗಲೂ ಕಾರ್ಮಿಕರು ಈ ಕೇಳಿಕೆಗಳನ್ನು ಕೇಳಲು, ಅದನ್ನ ನಿರಾಕರಿಸಿ, ಮುಷ್ಕರವನ್ನು ಅವರ ಮೇಲೆ ಹೇರುವುದೇಕೆ? ಎಂದು ನಾನು ಕಳೆದ ಬಾರಿ ಲೋಕ ಸಭೆಯಲ್ಲೇ ಸರಕಾರವನ್ನು ಪ್ರಶ್ನಿಸಿದ್ದೆ.

ಉತ್ತರವಾಗಿ ಸರಕಾರವು ಕೇಳಿಕೆಗಳ ಇತ್ಯರ್ಥದಲ್ಲಿ ಆಗುವ ಕಾಲವಿಳಂಬವನ್ನೂ ಪರಿಸ್ಥಿತಿ ಬಿಗಡಾಯಿಸುವುದನ್ನು ತಡೆಯುವ ಅಗತ್ಯತೆಯನ್ನು ಒಪ್ಪಿದೆ.

ಆವಾಗಿನಿಂದ ಹಲವಾರು ಕೇಂದ್ರಗಳಲ್ಲಿ ಕಾರ್ಮಿಕರು ಕೇಳಿಕೆಗಳನ್ನು ಮುಂಡಿಸಿದ್ದಾರೆ. ಕೆಲವು ಕಡೆಗಳಲ್ಲಿ ಇತ್ಯರ್ಥವೂ ಆಗಿದೆ. ಇನ್ನೂ ಹಲವು ಕಡೆಗಳಲ್ಲಿ ಇತ್ಯರ್ಥದ ಭರವಸೆ ಸಿಕ್ಕಿದೆ, ಆದರೆ ಪೂರೈಕೆಯಾಗಲಿಲ್ಲ. ಮತ್ತು ಸರಕಾರಿ ನೌಕರರ ಟ್ರೇಡ್ ಯೂನಿಯನ್ ಹಕ್ಕುಗಳ ಮೇಲೆ ಧಾಳಿ ಮುಂದುವರಿಯುತ್ತಿದೆ. ಫಲವಾಗಿ ಸರಕಾರದ ನೀತಿಯನ್ನು ಕಂಡು ಕಾರ್ಮಿಕರು ಕಂಗೆಟ್ಟಿದ್ದಾರೆ.

ಇನ್ನು, ಖಾಸಗಿ ಕ್ಷೇತ್ರದಲ್ಲೂ ಮಾಲಕರು ಇತ್ತೀಚೆಗೆ ಫ್ಯಾಕ್ಟರಿಗಳನ್ನು ಮುಚ್ಚುವ ನೀತಿಯನ್ನು ಅನುಸರಿಸುತ್ತಿದ್ದಾರೆ. ಅವರ ಲಂಚಬಡುಕತನವನ್ನು ಮರೆಸಲೋ ಅಥವಾ ಸರಕಾರ ತೆರಿಗೆ ವಿನಾಯಿತಿ ಕೊಡುವಂತೆ ಒತ್ತಾಯಿಸಲೋ, ಇಲ್ಲವೇ ಕಾರ್ಮಿಕರ ವೇತನದಲ್ಲಿ ಕಡಿತ ಮತ್ತು ಕೆಲಸದ ಪರಿಸ್ಥಿತಿಯಲ್ಲಿ ವಿಷಮತೆಯನ್ನು ಸೃಜಿಸಲೋ ಈ ಫ್ಯಾಕ್ಟರಿ ಮುಚ್ಚುವಿಕೆಯನ್ನು ಮಾಲೀಕರು ಬಳಸುತ್ತಿದ್ದಾರೆ.

ಮಾಲಿಕರ ಧಾಳಿ

ಈ ಬಗ್ಗೆ ಕೆಲವು ನಿದರ್ಶನಗಳನ್ನು ಕೊಡಬಹುದು: ತ್ರಿಪಕ್ಷ ಸಮ್ಮೇಳನದ ಒಪ್ಪಂದದ ಪ್ರಕಾರ ಕೆಲವು ನಿರ್ದಿಷ್ಟ ಸ್ಥಿತಿಗತಿಗಳನ್ನು ಪೂರೈಸದೆ, ರೇಷನಲೈಸೇಷನ್ ಜಾರಿಗೆ ತರಬಾರದೆಂದಿತ್ತು. ಹೀಗಿದ್ದರೂ ಕೂಡಾ ಕಾನ್ಪುರ ಹತ್ತಿ ಗಿರಣಿಗಳಲ್ಲಿ ಮತ್ತು ಕಲ್ಕತ್ತದ ಜೂಟ್ ಮಿಲ್ಲುಗಳಲ್ಲಿ ರೇಷನಲೈಸೇಷನನ್ನು ಜಾರಿ ಮಾಡಲಾಗಿದೆ.

ಗನಿಗಳಲ್ಲಿ ಸುರಕ್ಷಿತತೆಯ ನಿಯಮಗಳ ಉಲ್ಲಂಘನೆ ನಡೆದು, ಕಾರ್ಮಿಕರು ಅಪಘಾತಕ್ಕೆ ಸಿಲುಕಿ ಸಾಯುತ್ತಿದ್ದರೂ, ಈ ಗನಿ ಮಾಲಿಕರು ಕಾನೂನಿನ ಕೈಗೆ ಸಿಲುಕುವುದಿಲ್ಲ. ಈ ಬಗ್ಗೆ ಸರಕಾರದ ಭರವಸೆ ಒಡೆದ ಗುಳ್ಳೆಯಾಗಿದೆ.

ಇತ್ತೀಚಿಗೆ ಬೆಂಗಳೂರು ಮತ್ತು ನಾಸಿಕದಲ್ಲಿ ನಡೆದ ಸರಕಾರಿ ಫ್ಯಾಕ್ಟರಿ ಕಾರ್ಮಿಕರ ಮುಷ್ಕರ, ಬರ್ನ್‌ಪುರ ಮತ್ತು ಕುಲ್ಟಿ ಕಾರ್ಮಿಕರ ಹೋರಾಟ, ಜಮ್‌ಷೆಡ್‌ಪುರ ಕಾರ್ಮಿಕರ ಮೆರವಣಿಗೆ, ಪ್ಲ್ಯಾಂಟೇಷನ್ ಕಾನೂನುಗಳನ್ನು ಜಾರಿಗೆ ತರದೆ ತೋಟಗಳಲ್ಲಿ ಕಿರುಕುಳ ಕೊಡುತ್ತಿರುವ ಮಾಲಿಕರ ದುಶ್ಚಾಳಿ ಇವೆಲ್ಲಾ ಏನನ್ನು ತೋರಿಸುತ್ತದೆ? ಸರಕಾರ ಮತ್ತು ಮಾಲಿಕರು ಕಾರ್ಮಿಕರತ್ತ ತೋರುವ ನಡವಳಿಕೆಯಲ್ಲಿ ನಾಗರಿಕತೆಯ ಲಕ್ಷಣ ಇನ್ನೂ ಪೂರಾ ಬಂದಿಲ್ಲ ಎಂದೂ, ಕಾರ್ಮಿಕರು ಪ್ರದರ್ಶನ ಪ್ರತಿಭಟನೆ ಮಾಡಿದರೆ ಮಾತ್ರ ಮಾಲಿಕರ ಮತ್ತು ಸರಕಾರದ ವರ್ತನೆ ಬದಲಾಗುತ್ತದೆಂದೂ ಮೇಲಿನ ನಿದರ್ಶನಗಳಿಂದ ಸ್ಪಷ್ಟವಾಗುತ್ತದೆಯಲ್ಲವೆ?

ಕಾರ್ಮಿಕರು ಕೋಟೆಗಟ್ಟಲೆ ಹಣ ಸುರಿದ ನೌಕರರ ರಾಜ್ಯ ವಿಮಾ ಯೋಜನೆಯ ಪ್ರಕಾರ, ವಿಮೆಯಾದ ಕಾರ್ಮಿಕರಿಗೆ ವೈದ್ಯಕೀಯ ಸೌಕರ್ಯ ಕೊಡಬೇಕು. ಇದಕ್ಕಾಗಿ ಆಸ್ಪತ್ರೆಗಳನ್ನು ರಾಜ್ಯ ಸರಕಾರಗಳು ಕಟ್ಟಬೇಕೆಂದಿದ್ದರೂ ಅದಿನ್ನೂ ಕೈಗೂಡಿಲ್ಲ. ಈ ಬಗ್ಗೆ ಆಶ್ವಾಸನೆ ಇತ್ತು ಮೂರು ವರುಷಗಳು ಸಂದುವು.

ಆದುದರಿಂದ ಕಳೆದ ವರುಷ ಲೋಕ ಸಭೆಯಲ್ಲಿ, ಸರಕಾರವು ತನ್ನ ನೀತಿಗಳ ಬಗ್ಗೆ ಇತ್ತ ಆಶ್ವಾಸನೆಯನ್ನು ಜಾರಿಗೆ ತರಲು ಸಿದ್ಧವಾಗಿಲ್ಲವೆಂದು ಎ.ಐ.ಟಿ.ಯು.ಸಿ.ಯು ಹೇಳುತ್ತದೆ.

ಕಾರ್ಮಿಕ ವರ್ಗದ ಹಿತವನ್ನು ತುಳಿದು ಪ್ರತಿಗಾಮಿ ಹಾಗೂ ನೀತಿಭ್ರಷ್ಟ ಮಾಲಿಕರು ಲಾಭ ಪಡೆಯುವಂತೆ ರಾಜ್ಯಸರಕಾರಗಳೇ ಬೆಂಬಲವೀಯುತ್ತವೆ. ಇಂಟಕ್ ಯೂನಿಯನನ್ನು ಅದಕ್ಕೆ ಕೆಲಸಗಾರರ ಬೆಂಬಲವಿಲ್ಲದಿದ್ದರೂ ಕಾರ್ಮಿಕರ ಮೇಲೆ ಹೇರಲಾಗುತ್ತದೆ. ಅದು ಯಶಸ್ವಿಯಾಗದಲ್ಲಿ, ಪೋಲೀಸರನ್ನು ಉಪಯೋಗಿಸಿ ದಮನನೀತಿಯನ್ನು ಅನುಸರಿಸಲು ಮಾಲಿಕರೂ, ಸರಕಾರವೂ ಸದಾ ಸಿದ್ಧವಾಗಿದ್ದಾರೆ. ಈ ಅನ್ಯಾಯಗಳು ಎ.ಐ.ಟಿ.ಯು.ಸಿ. ಮತ್ತು ಎಚ್.ಎಂ.ಎಸ್. ಯೂನಿಯನ್‌ಗಳ ವಿರುದ್ಧ ಮಾತ್ರ ನಡೆಯುತ್ತಿವೆ.

ಆದುದರಿಂದ ಕಾರ್ಮಿಕರ ಕೇಳಿಕೆಗಳ ಚಾರ್ಟರಿನ ಮೇಲೆ ರಾಷ್ಟ್ರೀಯವಾಗಿ ಪ್ರದರ್ಶನ ನಡೆಸುವುದು ಅತ್ಯಗತ್ಯವೆಂದು ಎ.ಐ.ಟಿ.ಯು.ಸಿ. ಭಾವಿಸುತ್ತದೆ.

ಕಾರ್ಮಿಕರ ಸಂಯುಕ್ತ ಹೋರಾಟಗಳು ಎಷ್ಟೋ ಬಾರಿ ಸರಕಾರ ಮತ್ತು ಮಾಲಿಕರನ್ನು ಹಿಂದೇಟು ಹಾಕಿಸಿದೆ ಮತ್ತು ಕೇಳಿಕೆಗಳನ್ನು ಮಾನ್ಯ ಮಾಡುವಂತೆ ಮಾಡಿಸಿದೆ. ಆದರೆ ಇದು ಎಲ್ಲಾ ಉದ್ಯಮಗಳಲ್ಲೂ ಸರ್ವವ್ಯಾಪಿಯಾಗಿಲ್ಲ. ಉದಾಹರಣೆಗಾಗಿ ತಾತಾರು ಇನ್ನೂ ಒರಟಾಗಿಯೇ ಇದ್ದಾರೆ, ಬಂಗಾಳ ಸರಕಾರದ ಸಹಾಯದಿಂದ ಬರ್ನ್‌ಪುರದ ಮಾರ್ಟಿನ್ ಬರ್ನ್‌ರವರು ಕಾರ್ಮಿಕರೊಡನೆ ಕಾಲು ಕೆದರಿ ಕಾದಾಡಲು ಮುಂಬರುತ್ತಿದ್ದಾರೆ. ಗನಿಗಳ ಮಾಲಿಕರು 19ನೇ ಶತಮಾನದ ಗೂಂಡಾ ನೀತಿಗಳನ್ನು ಇನ್ನೂ ಬಳಸುತ್ತಿದ್ದಾರೆ. ಪ್ಲಾಂಟೇಶನುಗಳಲ್ಲಿ ಮಾಲಿಕರ

(೬ನೇ ಪುಟ ನೋಡಿ)

ಕಮ್ಯೂನಿಸ್ಟ್ ಪಕ್ಷದ ಸದಸ್ಯರ

[ಕಳೆದ ಸಂಚಿಕೆಯಿಂದ]

ಭಾರತ ಕಮ್ಯೂನಿಸ್ಟ್ ಪಕ್ಷದ ಹೊಸ ಕರಡು ಘಟನೆಯ ೯ನೇ ವಿಭಾಗದಲ್ಲಿ ಸದಸ್ಯತ್ವದ ಶುಲ್ಕ ವರ್ಷಕ್ಕೆ ರೂ. 1 ಎಂದೂ, ೧೦ನೇ ವಿಭಾಗದಲ್ಲಿ ಈ ಶುಲ್ಕದ ಶೇ. 10 ರಾಷ್ಟ್ರೀಯ ಮಂಡಳಿಗೂ, ಶೇ. 40 ರಾಜ್ಯದ ಅಥವಾ ಪ್ರಾಂತೀಯ ಮಂಡಳಿಗೂ, ಉಳಿದ ಶೇ. 50 ಜಿಲ್ಲಾ ಮಂಡಳಿ, ಪಾರ್ಟಿ ಶಾಖೆ ಮತ್ತು ಸ್ಥಳೀಯ ಸಮಿತಿಗಳೊಳಗೆ ಹಂಚತಕ್ಕದ್ದೆಂದು ತಿಳಿಸಲಾಗಿದೆ. ೧೧ನೇ ವಿಭಾಗದಲ್ಲಿ ಪ್ರಾಂತೀಯ ಅಥವಾ ಕೇಂದ್ರೀಯ ಕಾರ್ಯಕಾರಿ ಸಮಿತಿಗಳು ರಾಷ್ಟ್ರೀಯ ಮಂಡಳಿಯ ನಿಯಮಕ್ಕೊಳಪಟ್ಟು ಸದಸ್ಯರಿಗೆ ಲೆವಿ ಹಾಕಬಹುದೆಂದಿದೆ. ೧೨ ಮತ್ತು ೧೩ರಲ್ಲಿ ಸದಸ್ಯರ ಕರ್ತವ್ಯ ಮತ್ತು ಹಕ್ಕುಗಳ ನಿರೂಪಣೆ ಇದೆ.

೧೨. ಪಕ್ಷದ ಸದಸ್ಯರ ಕರ್ತವ್ಯಗಳು:

1. ಪಕ್ಷದ ಸದಸ್ಯರ ಕರ್ತವ್ಯಗಳು ಕೆಳಗಿನಂತಿವೆ:

(a) ತಾವು ಸೇರಿರುವ ಪಾರ್ಟಿ ಸಂಘಟನೆಯ ಚಟುವಟಿಕೆಯಲ್ಲಿ ಕ್ರಮಬದ್ಧವಾಗಿ ಭಾಗವಹಿಸುವುದು ಮತ್ತು ಪಾರ್ಟಿಯ ಧೋರಣೆ, ತೀರ್ಮಾನ ಮತ್ತು ಆದೇಶಗಳನ್ನು ನಿಷ್ಠೆಯಿಂದ ಕಾರ್ಯಗತಗೊಳಿಸುವುದು.

(b) ಮಾರ್ಕ್ಸ್‌ವಾದ-ಲೆನಿನ್‌ವಾದಗಳನ್ನು ಅಭ್ಯಾಸ ಮಾಡುವುದು ಮತ್ತು ನಮ್ಮ ತಿಳುವಳಿಕೆಯ ಮಟ್ಟವನ್ನು ಉತ್ತಮಗೊಳಿಸಲು ಯತ್ನಿಸುವುದು.

(c) ಪಾರ್ಟಿಯ ಪತ್ರಿಕೆಗಳನ್ನೂ ಪ್ರಕಾಶನಗಳನ್ನೂ ಓದುವುದು, ಸಹಾಯ ಮತ್ತು ಪ್ರಚಾರ ಮಾಡುವುದು.

(d) ಪಾರ್ಟಿಯ ಘಟನೆ ಮತ್ತು ಶಿಸ್ತನ್ನು ಪಾಲಿಸುವುದು ಮತ್ತು ಕಾರ್ಮಿಕ ವರ್ಗದ ಅಂತರ್‌ರಾಷ್ಟ್ರೀಯತೆಯ ಭಾವನೆಗನುಗುಣವಾಗಿಯೂ ಮತ್ತು ಕಮ್ಯೂನಿಸಂನ ಉತ್ತಮ ಧ್ಯೇಯಗಳಿಗನುಸಾರವಾಗಿಯೂ ವರ್ತಿಸುವುದು.

(e) ಜನತೆಯ ಮತ್ತು ಪಾರ್ಟಿಯ ಹಿತಗಳನ್ನು ವೈಯಕ್ತಿಕ ಹಿತಗಳಿಗಿಂತ ಮುಂದಿಡುವುದು.

(f) ಜನತೆಗೋಸ್ಕರ ಶ್ರದ್ಧೆಯಿಂದ ದುಡಿಯುವುದು ಮತ್ತು ಅವರೊಡನೆ ತಮ್ಮ ಸಂಪರ್ಕವನ್ನು ಸ್ಥಿರವಾಗಿ ಬಲಗೊಳಿಸುವುದು, ಜನತೆಯಿಂದ ಕಲಿಯುವುದು ಮತ್ತು ಅವರ ಅಭಿಪ್ರಾಯಗಳನ್ನೂ ಮತ್ತು ಬೇಡಿಕೆಗಳನ್ನೂ ಪಾರ್ಟಿಗೆ ವರದಿ ಮಾಡುವುದು, ಪಾರ್ಟಿಯಿಂದ ವಿನಾಯಿತಿ ಪಡೆದ ಹೊರತು, ಪಾರ್ಟಿಯ ನೇತೃತ್ವದಲ್ಲಿ ಯಾವುದಾದರೊಂದು ಸಾಮೂಹಿಕ ಸಂಘಟನೆಯಲ್ಲಿ ಕೆಲಸ ಮಾಡುವುದು.

(g) ಪಾರ್ಟಿಯೊಳಗೆ ಪರಸ್ಪರ ಗೆಳೆತನದ ಸಂಬಂಧವನ್ನು ಬೆಳೆಸುವುದು ಮತ್ತು ಯಾವಾಗಲೂ ಸೌಹಾರ್ದ ಭಾವನೆಯನ್ನು ಕಲ್ಪಿಸುವುದು.

(h) ಪರಸ್ಪರ ಸಹಾಯ ಮಾಡುವ ದೃಷ್ಟಿಯಿಂದಲೂ, ಮತ್ತು ವೈಯಕ್ತಿಕ ಮತ್ತು ಸಾಮೂಹಿಕ ಕೆಲಸವನ್ನು ಉತ್ತಮಗೊಳಿಸುವುದಕ್ಕೂ ಟೀಕೆ ಮತ್ತು ಸ್ವಯಂ ಟೀಕೆಯನ್ನು ಪ್ರಯೋಗಿಸುವುದು.

(i) ಪಾರ್ಟಿಗೆ ನಿಷ್ಕಪಟ, ಪ್ರಾಮಾಣಿಕ ಮತ್ತು ಸತ್ಯವಂತನಾಗಿರುವುದು ಮತ್ತು ಪಾರ್ಟಿಯ ನಂಬಿಕೆಗೆ ವಿಶ್ವಾಸಘಾತ ಮಾಡದಿರುವುದು.

(j) ಪಾರ್ಟಿಯ ಐಕ್ಯತೆ ಮತ್ತು ಒಗ್ಗಟ್ಟನ್ನು ಸಂರಕ್ಷಿಸುವುದು ಮತ್ತು ಕಾರ್ಮಿಕ ವರ್ಗದ ಮತ್ತು ದೇಶದ ದ್ರೋಹಿಗಳ ಬಗ್ಗೆ ಎಚ್ಚರಿಕೆಯಿಂದಿರುವುದು.

(k) ಭಾರತದ ಜನತೆಯ ಉಜ್ವಲ ಸಂಪ್ರದಾಯಗಳನ್ನು ಮತ್ತು ಅವರ ಸಮೃದ್ಧ ಸಾಂಸ್ಕೃತಿಕ ಪರಂಪರೆಗಳನ್ನು ಹೆಚ್ಚೆಚ್ಚಾಗಿ ತಿಳಿದುಕೊಳ್ಳಲು ಪ್ರಯತ್ನಿಸುವುದು.

2. ಮೇಲಿನ ಕರ್ತವ್ಯಗಳನ್ನು ಪಾರ್ಟಿ ಸದಸ್ಯರು ಪೂರೈಸುವಂತೆ ಪಾರ್ಟಿ ಸಂಘಟನೆಗಳು ಕ್ರಮ ತೆಗೆದುಕೊಳ್ಳುವುದಲ್ಲದೆ ಈ ಕರ್ತವ್ಯಗಳನ್ನು ನೆರವೇರಿಸುವುದಕ್ಕೆ ಸಾಧ್ಯವಾದ ಎಲ್ಲ ರೀತಿಗಳಲ್ಲೂ ಸಹಾಯನೀಡಬೇಕು.

೧೩. ಪಕ್ಷದ ಸದಸ್ಯರ ಹಕ್ಕುಗಳು:

1. ಪಕ್ಷದ ಸದಸ್ಯರ ಹಕ್ಕುಗಳು ಕೆಳಗಿನಂತಿವೆ:

(a) ಪಾರ್ಟಿಯ ಅಂಗಗಳನ್ನು ಮತ್ತು ಪಾರ್ಟಿಯ ಸಮಿತಿಗಳನ್ನು ಆರಿಸುವುದು ಮತ್ತು ಅವುಗಳಿಗೆ ಆರಿಸಲ್ಪಡುವುದು.

(b) ಪಾರ್ಟಿಯ ಧೋರಣೆಯನ್ನು ನಿರ್ಧರಿಸಲಿಕ್ಕೂ, ಮತ್ತು ಪಾರ್ಟಿಯ ತೀರ್ಮಾನಗಳನ್ನು ಮಾಡಲಿಕ್ಕೂ ಸಹಾಯಕವಾಗುವಂತೆ ಚರ್ಚೆಗಳಲ್ಲಿ ನಿಸ್ಸಂಕೋಚವಾಗಿ ಭಾಗವಹಿಸುವುದು.

(c) ಪಾರ್ಟಿಯಲ್ಲಿ ತಮ್ಮ ಕೆಲಸದ ಬಗ್ಗೆ ಸಲಹೆ ನೀಡುವುದು ತಮ್ಮ ಯೋಗ್ಯತೆ ಮತ್ತು ಜೀವನ ಪರಿಸ್ಥಿತಿಗಳಿಗನುಸಾರವಾಗಿ ತಮಗೆ ಕೆಲಸಗಳನ್ನು ವಹಿಸಿಕೊಳ್ಳುವುದು.

(d) ಪಾರ್ಟಿಯ ಸಭೆಗಳಲ್ಲಿ ಪಾರ್ಟಿ ಸಮಿತಿಗಳ ಬಗ್ಗೆ ಮತ್ತು ಪಾರ್ಟಿ ಕಾರ್ಯಕರ್ತರ ಬಗ್ಗೆ ಟೀಕೆ ಮಾಡುವ ಅವಕಾಶ.

(e) ಯಾವುದಾದರೂ ಪಾರ್ಟಿ ಸದಸ್ಯನ ಮೇಲೆ ಶಿಸ್ತಿನ ಕ್ರಮವನ್ನು ಪಾರ್ಟಿ ಸಮಿತಿಯಾಗಲಿ ಅಥವಾ ಯಾವುದೇ ಪಾರ್ಟಿ ಸಂಘಟನೆಯಾಗಲಿ ಚರ್ಚಿಸುವ ಕಾಲದಲ್ಲಿ ತನ್ನ ಅಭಿಪ್ರಾಯವನ್ನು ಖುದ್ದಾಗಿಡಲು ಹಕ್ಕಿರುವುದು. ಅಥವಾ ಸದಸ್ಯನು ಗಂಭೀರವಾದ ತಪ್ಪು ಮಾಡಿರುವ ಆರೋಪ ಬಂದ ಸಂದರ್ಭದಲ್ಲಿ ಅವನ ವೈಯಕ್ತಿಕ ನಡತೆ ಅಥವಾ ಕೆಲಸದ ಬಗ್ಗೆಯೂ ಖುದ್ದಾಗಿ ಹೇಳಿಕೆಯನ್ನೀಯಲು ಅವಕಾಶವಿರುವುದು.

(f) ಪಾರ್ಟಿ ಸಮಿತಿಯ ಅಥವಾ ಸಂಘಟನೆಯ ತೀರ್ಮಾನಕ್ಕೆ ಯಾವುದೇ ಪಾರ್ಟಿ ಸದಸ್ಯನು ವಿರೋಧವಿದ್ದ ಪಕ್ಷದಲ್ಲಿ ಅವನು ಅಥವಾ ಅವಳು ಮೇಲಿನ ಕಮಿಟಿಗೆ ತನ್ನ ಅಭಿಪ್ರಾಯ ತಿಳಿಸಬಹುದು. ರಾಷ್ಟ್ರೀಯ ಮಂಡಳಿ ಮತ್ತು ಪಾರ್ಟಿ ಅಧಿವೇಶನದವರೆಗೂ ತಿಳಿಸಲಡ್ಡಿಯಿಲ್ಲ. ಈ ಸಂದರ್ಭಗಳಲ್ಲಿ ಪಾರ್ಟಿ ಸದಸ್ಯನು ಪಾರ್ಟಿ ತೀರ್ಮಾನಗಳನ್ನು ಜಾರಿಗೆ ತರುವುದಲ್ಲದೆ ಆಚರಣೆಯ ಒರೆಗಲ್ಲಿನ ಮತ್ತು ಪರಸ್ಪರ ಸೌಹಾರ್ದಪರ ಚರ್ಚೆಗಳ ಮೂಲಕ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಪ್ರಯತ್ನಿಸುವುದು.

(g) ರಾಷ್ಟ್ರೀಯ ಮಂಡಳಿ ಮತ್ತು ಪಾರ್ಟಿ ಅಧಿವೇಶನಗಳ ವರೆಗಿನ ಮೇಲಣ ಸಂಘಟನೆಗಳಿಗೆ ಹೇಳಿಕೆಯನ್ನಾಗಲಿ, ಮನವಿ ಅಥವಾ ದೂರನ್ನಾಗಲಿ ಕೊಡುವ ಅಧಿಕಾರವಿರುವುದು.

2. ಈ ಹಕ್ಕುಗಳಿಗೆ ಮನ್ನಣೆ ಕೊಡುವುದು ಪಾರ್ಟಿ ಸಂಘಟನೆಯ ಮತ್ತು ಕಾರ್ಯಕರ್ತರ ಕರ್ತವ್ಯ.

೧೪. ಪ್ರಜಾಪ್ರಭುತ್ವವಾದೀ ಕೇಂದ್ರೀಕರಣದ ತತ್ವಗಳು:

1. ಪಾರ್ಟಿಯ ಘಟನೆಯು ಪ್ರಜಾಪ್ರಭುತ್ವಾತ್ಮಕ ಕೇಂದ್ರೀಕರಣದ ತತ್ವಗಳ ಆಧಾರದಲ್ಲಿ ರಚನೆಯಾಗಿದೆ. ಮತ್ತು ಪಾರ್ಟಿಯ ಆಂತರಿಕ ಜೀವನವು ಇದೇ ತತ್ವಗಳನ್ನವಲಂಬಿಸಿದೆ. ಪ್ರಜಾಪ್ರಭುತ್ವಾತ್ಮಕ ಕೇಂದ್ರೀಕರಣವೆಂದರೆ ಸಂಪೂರ್ಣವಾದ ಪಾರ್ಟಿಯ ಆಂತರಿಕ ಪ್ರಜಾಪ್ರಭುತ್ವದ ಆಧಾರದ ಮೇಲಿರುವ ಕೇಂದ್ರ ನಾಯಕತ್ವ ಮತ್ತು ಕೇಂದ್ರೀಯವಾದ ನಾಯಕತ್ವದ ಮಾರ್ಗದರ್ಶನದಲ್ಲಿರುವ ಪಾರ್ಟಿಯ ಆಂತರಿಕ ಪ್ರಜಾತಂತ್ರವಾಗಿದೆ.

ಪಾರ್ಟಿ ಘಟನೆಯ ಕ್ಷೇತ್ರದಲ್ಲಿ ಮಾರ್ಗದರ್ಶನ ಮಾಡುವ ಪ್ರಜಾಪ್ರಭುತ್ವವಾದಿ ಕೇಂದ್ರೀಕರಣದ ತತ್ವಗಳು ಕೆಳಗಿನದಾಗಿವೆ:

(a) ಮೇಲಿಂದ ಕೆಳಗಿನ ತನಕ ಪಾರ್ಟಿ ಸಮಿತಿಗಳ ಎಲ್ಲ ನಾಯಕಾಂಗಗಳೂ ಚುನಾಯಿಸಲ್ಪಡುವುವು.

(b) ಅಲ್ಪ ಸಂಖ್ಯಾತರು ಬಹು ಸಂಖ್ಯಾತರ ತೀರ್ಮಾನಗಳನ್ನು ಜಾರಿಗೆ ತರತಕ್ಕದ್ದು; ಮೇಲಿನ ಪಾರ್ಟಿ ಸಂಘಟನೆಗಳ ಮತ್ತು ಸಮಿತಿಗಳ ತೀರ್ಮಾನ ಮತ್ತು ಆಜ್ಞೆಗಳನ್ನು ಪಕ್ಷದ ಕೆಳಗಿನ ಸಂಘಟನೆಗಳು ಜಾರಿಗೆ ತರುವುವು. ವ್ಯಕ್ತಿಯು ಸಾಮುದಾಯಿಕ ಅಭಿಪ್ರಾಯಕ್ಕೆ ಅಧೀನನಾಗುವುದು. ಪಕ್ಷದ ಅಧಿವೇಶನದ ಮತ್ತು ರಾಷ್ಟ್ರೀಯ ಮಂಡಳಿಯ ತೀರ್ಮಾನಗಳನ್ನೂ ಮತ್ತು ಆಜ್ಞೆಗಳನ್ನೂ ಎಲ್ಲ ಪಕ್ಷದ ಸಂಘಟನೆಗಳೂ ಜಾರಿಗೊಳಿಸುವುದು.

(c) ಎಲ್ಲ ಪಾರ್ಟಿ ಸಮಿತಿಗಳೂ ತಮ್ಮ ಕೆಲಸದ ಬಗ್ಗೆ ಕೆಳಗಿನ ಪಾರ್ಟಿ ಸಂಘಟನೆಗೆ ಕಾಲಕಾಲಕ್ಕೆ ವರದಿ ಕೊಡುವುದು ಮತ್ತು ಕೆಳಗಿನ ಸಮಿತಿಗಳು ಅದೇ ರೀತಿಯಲ್ಲಿ ವರದಿಗಳನ್ನು ತಮ್ಮ ಮೇಲಣ ಸಮಿತಿಗಳಿಗೆ ಕೊಡುವುದು.

(d) ಎಲ್ಲ ಪಾರ್ಟಿ ಸಮಿತಿಗಳೂ, ಅದರಲ್ಲೂ ಮುಖ್ಯವಾಗಿ ಮುಂದಾಳಾದ ಪಾರ್ಟಿ ಸಮಿತಿಗಳು, ಕೆಳಘಟ್ಟದ ಪಾರ್ಟಿ ಸಂಘಟನೆಗಳ ಮತ್ತು ಸಾಮಾನ್ಯ ಸದಸ್ಯರ ಅಭಿಪ್ರಾಯಗಳಿಗೂ ಟೀಕೆಗಳಿಗೂ ಸದಾ ಗಮನಕೊಡುವುದು.

(e) ಎಲ್ಲ ಪಾರ್ಟಿ ಸಮಿತಿಗಳೂ ವೈಯಕ್ತಿಕ ಜವಾಬ್ದಾರಿಯೊಡನೆ ಸಾಮುದಾಯಿಕ ತೀರ್ಮಾನ ಮತ್ತು ವಿಮರ್ಶೆಗಳ ತತ್ವಗಳ ಮೇರೆಗೆ ಕಟ್ಟುನಿಟ್ಟಾಗಿ ಕೆಲಸ ಮಾಡುವುದು.

(f) ಇಡೀ ದೇಶವ್ಯಾಪಿ ಪ್ರಶ್ನೆಗಳನ್ನಾಗಲಿ, ಒಂದು ರಾಜ್ಯಕ್ಕಿಂತ ಹೆಚ್ಚಾಗಿ ಸಂಬಂಧಿಸಿದ ಪ್ರಶ್ನೆಗಳನ್ನಾಗಲಿ, ಅಥವಾ ದೇಶಾದ್ಯಂತ ಒಂದೇ ರೀತಿಯ ನಿರ್ಧಾರವಾಗ ಬೇಕಾಗಿರುವ ವಿಶಯಗಳನ್ನಾಗಲಿ ಅಖಿಲ ಭಾರತ ಪಾರ್ಟಿ ಸಂಘಟನೆಗಳು ನಿರ್ಧರಿಸತಕ್ಕದ್ದು. ಒಂದು ರಾಜ್ಯ, ಪ್ರಾಂತ್ಯ ಅಥವಾ ಜಿಲ್ಲೆಗೆ ಅನ್ವಯಿಸುವ ಪ್ರಶ್ನೆಗಳನ್ನು ಸಾಮಾನ್ಯವಾಗಿ ಆಯಾ ಮಟ್ಟದ ಪಾರ್ಟಿ ಸಂಘಟನೆಗಳೇ ತೀರ್ಮಾನ ಮಾಡುವುದು. ಆದರೆ ಯಾವ ಸಂದರ್ಭದಲ್ಲೂ ಈ ತೀರ್ಮಾನಗಳು ಮೇಲಿನ ಪಾರ್ಟಿ ಸಂಘಟನೆಯ ತೀರ್ಮಾನಗಳಿಗೆ ವ್ಯತಿರಿಕ್ತವಾಗಿರ ಕೂಡದು. ಯಾವುದಾದರೊಂದು ಮಹತ್ವವಾದ ಪ್ರಾಂತೀಯ ವಿಷಯದ ಮೇಲೆ ಕೇಂದ್ರ ಪಾರ್ಟಿ ನಾಯಕತ್ವವು ತೀರ್ಮಾನ ತೆಗೆದುಕೊಳ್ಳುವುದಿದ್ದರೆ ಸಂಬಂಧಪಟ್ಟ ಪ್ರಾಂತಹ ಪಾರ್ಟಿ ಸಂಘಟನೆಯೊಡನೆ ಮೊದಲು ಪರ್ಯಾಲೋಚನೆ ನಡಿಸತಕ್ಕದ್ದು.

(g) ದೇಶಾದ್ಯಂತ ಪಾರ್ಟಿಯ ಧೋರಣೆಗೆ ಸಂಬಂಧ ಪಡುವ ಪ್ರಶ್ನೆಗಳ ವಿಷಯದಲ್ಲಿ ಅದರ ಬಗ್ಗೆ ಪಾರ್ಟಿಯು ಪ್ರಥಮ ಬಾರಿ ಧೋರಣೆಯನ್ನು ನಿರ್ಧರಿಸುವುದಿದ್ದರೆ, ಪಾರ್ಟಿಯ ಕೇಂದ್ರ ನಾಯಕತ್ವಕ್ಕೆ ಮಾತ್ರ ಧೋರಣೆಯ ನಿರೂಪಣೆಯನ್ನು ಕೊಡಲು ಅಧಿಕಾರವಿರುತ್ತದೆ. ಕೆಳಗಿನ ಸಮಿತಿಗಳು ಅವರ ಅಭಿಪ್ರಾಯಗಳನ್ನೂ ಮತ್ತು ಸೂಚನೆಗಳನ್ನೂ ಸಕಾಲದಲ್ಲಿ ಕೇಂದ್ರ ಸಮಿತಿಯ ಗಮನಕ್ಕೆ ಕಳಿಸಬಹುದು ಮತ್ತು ಕಳಿಸಬೇಕು.

2. ಪಾರ್ಟಿಯ ಆಂತರಿಕ ಜೀವನದ ಕ್ಷೇತ್ರದಲ್ಲಿ ಪ್ರಜಾಪ್ರಭುತ್ವವಾದಿ ಕೇಂದ್ರೀಕರಣದ ತತ್ವಗಳು ಕೆಳಗಿನಂತಿವೆ:

(a) ಪಾರ್ಟಿಗೆ ಅದರ ಧೋರಣೆಗೆ ಮತ್ತು ಕೆಲಸಕ್ಕೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳ ಬಗ್ಗೆಯೂ ಪಾರ್ಟಿ ಘಟಕದಲ್ಲಿ ಸ್ವತಂತ್ರವಾಗಿ ಮುಚ್ಚುಮರೆಯಿಲ್ಲದೆ ಚರ್ಚೆ ನಡಿಸುವುದು.

(b) ಪಾರ್ಟಿಯ ಜೀವನ ಮತ್ತು ಚಟುವಟಿಕೆಯಲ್ಲಿ ಪರಿಣಾಮಕಾರಿಯಾಗಿ ಎಲ್ಲ ಪಾರ್ಟಿ ಸದಸ್ಯರೂ ಭಾಗವಹಿಸುವಂತಾಗಲು, ಪಾರ್ಟಿಯ ಧೋರಣೆಗಳನ್ನು ಪ್ರಚಾರ ಮಾಡಲಿಕ್ಕೂ ಮತ್ತು ಕಾರ್ಯಗತಗೊಳಿಸಲಿಕ್ಕೂ ಅವರನ್ನು ಕ್ರಿಯಾಶೀಲರನ್ನಾಗಿ ಮಾಡಲು, ಅವರ ಸೈದ್ಧಾಂತಿಕ ರಾಜಕೀಯ ಮಟ್ಟವನ್ನು ಬೆಳೆಸಲು ಮತ್ತು ಅವರ ಸಾಮಾನ್ಯ ಶಿಕ್ಷಣವನ್ನು ಉತ್ತಮಗೊಳಿಸಲು ಅವಿಶ್ರಾಂತವಾಗಿ ಪ್ರಯತ್ನಿಸುವುದು.

(c) ಯಾವುದಾದರೂ ಪಾರ್ಟಿ ಸಮಿತಿಯಲ್ಲಿ ತೀವ್ರ ಮತಭೇದ ತಲೆಯೆತ್ತಿದಾಗ ಒಪ್ಪಂದಕ್ಕೆ ಬರಲು ಎಲ್ಲ ಪ್ರಯತ್ನಗಳನ್ನೂ ಮಾಡುವುದು. ಅದು ಸಾಧ್ಯವಾಗದಿದ್ದರೆ, ಪಾರ್ಟಿಯ ಮತ್ತು ಸಾಮೂಹಿಕ ಚಳುವಳಿಗೆ ಅದರ ತೀರ್ಮಾನವು ಕೂಡಲೇ ಅಗತ್ಯವಿಲ್ಲದಿದ್ದಲ್ಲಿ, ಭಿನ್ನಾಭಿಪ್ರಾಯಗಳನ್ನು ಇನ್ನೂ ಹೆಚ್ಚಿನ ಚರ್ಚೆಗಳ ಮೂಲಕ ಬಿಡಿಸಲು, ತೀರ್ಮಾನವನ್ನು ಮುಂದಕ್ಕೆ ಹಾಕುವುದು.

ಕರ್ತವ್ಯ ಮತ್ತು ಹಕ್ಕುಗಳು

(d) ಟೀಕೆ ಮತ್ತು ಸ್ವಯಂ-ಟೀಕೆಗೆ, ಮುಖ್ಯವಾಗಿ ಕೆಳಗಿನಿಂದ ಬರುವ ಟೀಕೆಗೆ, ಮೇಲಿಂದ ಕೆಳಗಿನ ತನಕ ಎಲ್ಲ ಮಟ್ಟಗಳಲ್ಲೂ ಪ್ರೋತ್ಸಾಹ ಕೊಡುವುದು.

(e) ಯಾವ ರೂಪದಲ್ಲೇ ಆಗಲಿ ಪಾರ್ಟಿಯೊಳಗೆ ಒಡಕುಂಟು ಮಾಡುವುದಕ್ಕಾಗಲಿ ಮತ್ತು ಒಳಗುಂಪುಗಳನ್ನು ಕಟ್ಟುವುದಕ್ಕಾಗಲಿ ಎಂದೂ ಅವಕಾಶವಿಲ್ಲ.

(f) ಆತ್ಮೀಯತೆಯ ಸಂಬಂಧ ಮತ್ತು ಪರಸ್ಪರ ಸಹಾಯಗಳ ಮೂಲಕವೂ, ಕಾಮ್ರೇಡ್ಸರೊಡನೆ ಸಹಾನುಭೂತಿಯಿಂದ ವರ್ತಿಸಿ ಅವರ ತಪ್ಪನ್ನು ತಿದ್ದುವುದರಿಂದಲೂ, ಅವರನ್ನು ಮತ್ತು ಅವರ ಕೆಲಸವನ್ನು ಯಾವುದೇ ಒಂದು ತಪ್ಪು ಅಥವಾ ಘಟನೆಯ ಪ್ರತ್ಯೇಕತೆಯ ಆಧಾರದಿಂದ ನೋಡಿ ಅವರನ್ನೂ ಅವರ ಕೆಲಸವನ್ನೂ ತೀರ್ಮಾನಿಸದೆ, ಅವರು ಪಾರ್ಟಿಗೆ ದುಡಿದಿರುವ ಹಿಂದಿನ ಚರಿತ್ರೆಯನ್ನೆಲ್ಲಾ ಗಣನೆಗೆ ತೆಗೆದುಕೊಂಡು ತೀರ್ಮಾನಿಸುವುದರಿಂದಲೂ, ಪಾರ್ಟಿಯ ಚೈತನ್ಯತೆಯನ್ನು ಬಲಗೊಳಿಸುವುದು.

೧೫. ಅಖಿಲ ಭಾರತ ಪಾರ್ಟಿ ಅಧಿವೇಶನ: ಇದರಲ್ಲಿ ೩ ವರ್ಷಕ್ಕೊಂದು ಸಲ ಪಾರ್ಟಿ ಅಧಿವೇಶನ ಸೇರಬೇಕೆಂದೂ ವಿಶೇಷ ಅಧಿವೇಶನಗಳ ಬಗ್ಗೆಯೂ, ಅಧಿವೇಶನದ ಪ್ರತಿನಿಧಿಗಳ, ಅದರಲ್ಲಿ ಚರ್ಚಿಸಲ್ಪಡುವ ವಿಷಯಗಳ ಮತ್ತು ಅದು ಆರಿಸಬೇಕಾದ ಅಂಗಗಳ ಬಗ್ಗೆ ವಿವರಿಸಲಾಗಿದೆ.

೧೬ ಮತ್ತು ೧೭. ಇದರಲ್ಲಿ ರಾಷ್ಟ್ರೀಯ ಮಂಡಳಿಯ ವಿವರ ಕೊಡಲಾಗಿದೆ. ಅಧಿವೇಶನದಲ್ಲಿ ಚುನಾವಣೆಯಾಗುವ ರಾಷ್ಟ್ರೀಯ ಮಂಡಳಿಯಲ್ಲಿ 101 ಸದಸ್ಯರಿಗಿಂತ ಹೆಚ್ಚಾಗಿರಕೂಡದು. ಅದು ವಿಸ್ತೃತ ಮತ್ತು ಯೋಗ್ಯ ನಾಯಕತ್ವ ಕೊಡುವಂತಿರತಕ್ಕದ್ದು. ಅದರಲ್ಲಿ ಜನತೆಯೊಡನೆ ನಿಕಟ ಸಂಪರ್ಕವಿದ್ದು ಕಾರ್ಮಿಕ ವರ್ಗದ ದೃಢವಾದ ಕ್ರಾಂತಿಕಾರಿ ದೃಷ್ಟಿಕೋನವಿರುವವರು ಮತ್ತು ಮಾರ್ಕ್ಸ್-ಲೆನಿನ್ ಸಿದ್ಧಾಂತವನ್ನು ಅಭ್ಯಾಸ ಮಾಡಿದವರಿರಬೇಕು. ಪಟ್ಟಿಯಲ್ಲಿ ಉತ್ತಮ ಶಕ್ತಿಯುಳ್ಳವರನ್ನು, ಎಲ್ಲ ಪ್ರಾಂತಗಳ ಅನುಭವಗಳನ್ನೂ, ಸಾಮೂಹಿಕ ರಂಗಗಳ ಮತ್ತು ಪಾರ್ಟಿಯ ಇತರ ಕ್ಷೇತ್ರಗಳ ಚಟುವಟಿಕೆಗಳನ್ನೂ ಕ್ರೋಢೀಕರಿಸತಕ್ಕದ್ದೆಂದು ಹೇಳಿದೆ. ಕೇಂದ್ರ ಕಂಟ್ರೋಲ್ ಕಮಿಷನ್ ಸಹ ಅಧಿವೇಶನದಲ್ಲಿ ಆರಿಸಲ್ಪಡುವುದು.

೧೭. ರಲ್ಲಿ ರಾಷ್ಟ್ರೀಯ ಮಂಡಳಿಯ ಹಕ್ಕು ಮತ್ತು ಜವಾಬ್ದಾರಿಗಳ ವಿವರವಿದೆ. ಪಾರ್ಟಿಯ ಶ್ರೇಷ್ಠ ಅಂಗವಾಗಿರುವುದಲ್ಲದೆ ಅದು 25ಕ್ಕಿಂತ ಹೆಚ್ಚಾಗಿರದ ಕೇಂದ್ರ ಕಾರ್ಯಕಾರಿ ಸಮಿತಿಯನ್ನೂ, ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳನ್ನೂ ಆರಿಸುವುದು. ಅವರ ಸಂಖ್ಯೆ 6ರಿಂದ 8ರಷ್ಟಿದ್ದು ಅದು ಪಾರ್ಟಿಯ ಸೆಕ್ರೆಟೇರಿಯಟ್ ಆಗಿರುವುದು.

೧೮ರಲ್ಲಿ ಕೇಂದ್ರ ಕಾರ್ಯಕಾರಿ ಸಮಿತಿಯ ವಿವರ ಕೊಡಲಾಗಿದೆ.

೧೯, ೨೦ ಮತ್ತು ೨೧. ಈ ಭಾಗಗಳಲ್ಲಿ ರಾಜ್ಯ ಅಥವಾ ಪ್ರಾಂತೀಯ ಅಂಗಗಳ, ಪ್ರಾಂತೀಯ ಮಂಡಳಿಗಳ ಮತ್ತು ಕಾರ್ಯಕಾರಿ ಸಮಿತಿಗಳನ್ನು ವಿವರಿಸಿದೆ. ಪ್ರಾಂತೀಯ ಮಂಡಳಿಯಲ್ಲಿ 101ಕ್ಕಿಂತ ಹೆಚ್ಚು ಸದಸ್ಯರಿರಕೂಡದು. ಅದು ಎಷ್ಟಿರಬೇಕೆಂಬುದನ್ನು ಪ್ರಾಂತ ಸಮ್ಮೇಳನ ತೀರ್ಮಾನಿಸುವುದು. ಮಂಡಳಿಯು 25 ಸದಸ್ಯರಿಗಿಂತ ಹೆಚ್ಚಾಗಿಲ್ಲದ ಕಾರ್ಯಕಾರಿ ಸಮಿತಿಯನ್ನೂ, ಪ್ರಾಂತ ಕಾರ್ಯದರ್ಶಿಯನ್ನೊಳಗೊಂಡು 7ರಿಂದ 9ರ ಸಂಖ್ಯೆಯ ಸೆಕ್ರೆಟೇರಿಯಟ್ಟನ್ನು ಆರಿಸುವುದು.

ಪ್ರಾಂತೀಯ ಕಾರ್ಯಕಾರಿ ಸಮಿತಿಯು ಜಿಲ್ಲೆಗಳಿಗೆ ಮಾರ್ಗದರ್ಶನ ಮತ್ತು ಸಹಾಯ ನೀಡುವುದು; ಪ್ರಾಂತೀಯ ಮುದ್ರಣಾಲಯ ಮತ್ತು ಪ್ರಕಾಶನಗಳನ್ನು ನಡೆಸುವುದು; ರಾಜ್ಯದ ವಿಧಾನ ಸಭೆಯ, ಮುನಿಸಿಪಾಲಿಟಿಗಳ ಮತ್ತಿತರ ಸ್ಥಳೀಯ ಸಂಸ್ಥೆಗಳ ಪಾರ್ಟಿ ಸದಸ್ಯರ ಕೆಲಸಗಳನ್ನು ನೋಡಿಕೊಳ್ಳುವುದು; ಸಾಮೂಹಿಕ ಸಂಸ್ಥೆಗಳಲ್ಲಿ ಪಾರ್ಟಿ ಕೆಲಸಗಳಿಗೆ ಮಾರ್ಗದರ್ಶನ ನೀಡುವುದು. ಸೆಕ್ರೆಟೇರಿಯಟ್ ಸದಸ್ಯರು ಸಂಪೂರ್ಣವಾಗಿ ಪ್ರಾಂತೀಯ ಕೇಂದ್ರದ ಚಟುವಟಿಕೆ ನಡಿಸುವುದಲ್ಲದೆ ವೈಯಕ್ತಿಕ ಜವಾಬ್ದಾರಿಯೊಡನೆ ಸಾಮೂಹಿಕವಾಗಿ ದುಡಿಯತಕ್ಕದ್ದು. ಪ್ರಾಂತೀಯ ಮಂಡಳಿಯ ರಚನೆಯ ಬಗ್ಗೆ ಕೆಲವು ಪ್ರಾಂತಗಳಿಗೆ ವಿನಾಯಿತಿ ಕೊಡಲು ರಾಷ್ಟ್ರೀಯ ಮಂಡಳಿಗೆ ಹಕ್ಕಿದೆ. ಆ ಸಂದರ್ಭದಲ್ಲಿ ಪ್ರಾಂತೀಯ ಸಮ್ಮೇಳನಗಳ ಪ್ರಾಂತೀಯ ಕಾರ್ಯಕಾರಿ ಸಮಿತಿಯನ್ನು ಆರಿಸತಕ್ಕದ್ದು ಮತ್ತು ಕಾರ್ಯಕಾರಿ ಸಮಿತಿಯು ಕಾರ್ಯದರ್ಶಿ ಮತ್ತು ಸೆಕ್ರೆಟೇರಿಯಟ್ಟನ್ನು ಆರಿಸುವುದು.

೨೨, ೨೩ ಮತ್ತು ೨೪ – ಈ ವಿಭಾಗಗಳಲ್ಲಿ ಜಿಲ್ಲೆಯ ಪಾರ್ಟಿ ಅಂಗಗಳು, ಜಿಲ್ಲಾ ಸಮ್ಮೇಳನ, ಜಿಲ್ಲಾ ಮಂಡಳಿ, ಜಿಲ್ಲಾ ಕಾರ್ಯಕಾರಿ ಸಮಿತಿಗಳ ವಿವರ ಕೊಟ್ಟಿದೆ. ಜಿಲ್ಲಾ ಮಂಡಳಿ, ಕಾರ್ಯಕಾರಿ ಸಮಿತಿ ಮತ್ತು ಸೆಕ್ರೆಟೇರಿಯಟ್‌ಗಳ ಸಂಖ್ಯೆಯನ್ನು ಜಿಲ್ಲಾ ಸಮ್ಮೇಳನಕ್ಕೂ ಜಿಲ್ಲಾ ಮಂಡಳಿಗೂ ಬಿಟ್ಟಿದೆ.

ಜಿಲ್ಲಾ ಸಮಿತಿಯ ಜವಾಬ್ದಾರಿಗಳು:

1. ಜಿಲ್ಲಾ ಮಂಡಳಿಯ ಸಭೆ ಸೇರಿಸುವುದು ಮತ್ತು ಅದಕ್ಕೆ ವರದಿಗಳನ್ನೂ, ನಿರ್ಣಯಗಳನ್ನು ತಯಾರಿಸುವುದು.

2. ಕೆಳಗಿನ ಘಟಕಗಳ ಕೆಲಸವನ್ನು ವಿಮರ್ಶಿಸುವುದು.

3. ಸಾಮೂಹಿಕ ಸಂಘಟನೆಗಳಿಗೆ ಮಾರ್ಗದರ್ಶನ ಮತ್ತು ಕಾರ್ಯತಃ ಸಹಾಯ ನೀಡುವುದು.

4. ಪಾರ್ಟಿಯ ಪತ್ರಿಕೆ ಮತ್ತು ಸಾಹಿತ್ಯಗಳನ್ನು ಹಂಚುವುದು.

5. ಮುನಿಸಿಪಾಲಿಟಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿರುವ ಪಾರ್ಟಿ ಸದಸ್ಯರ ಕೆಲಸಗಳಿಗೆ ಮಾರ್ಗದರ್ಶನ ಕೊಡುವುದು.

6. ಜಿಲ್ಲೆಯ ಹಣಕಾಸಿನ ವಿಷಯ ನೋಡುವುದು.

7. ಜಿಲ್ಲೆಯ ಪಾರ್ಟಿ ಸ್ಕೂಲು ಮತ್ತು ಪಾರ್ಟಿ ಶಿಕ್ಷಣಗಳನ್ನು ನಡೆಸುವುದು.

ಯಾವುದಾದರೂ ಜಿಲ್ಲೆಗೆ ಜಿಲ್ಲಾ ಮಂಡಳಿ ಅವಶ್ಯವಿಲ್ಲವೆಂದು ಪ್ರಾಂತೀಯ ಕಾರ್ಯಕಾರಿ ಸಮಿತಿ ಅಭಿಪ್ರಾಯ ಪಟ್ಟರೆ ಆ ರೀತಿಯ ತೀರ್ಮಾನ ಮಾಡುವ ಅಧಿಕಾರವಿದೆ; ಆ ಸಂದರ್ಭದಲ್ಲಿ ಜಿಲ್ಲಾ ಸಮ್ಮೇಳನವು ಜಿಲ್ಲಾ ಕಾರ್ಯಕಾರಿ ಸಮಿತಿಯನ್ನು ಆರಿಸುವುದು. ಕಾರ್ಯಕಾರಿ ಸಮಿತಿಯು ಕಾರ್ಯದರ್ಶಿ ಮತ್ತು ಸೆಕ್ರೆಟೇರಿಯಟ್ಟನ್ನು ಆರಿಸುವುದು.

೨೫. ರಲ್ಲಿ ಮಧ್ಯವರ್ತಿ ಅಂಗಗಳ ಬಗ್ಗೆ ಹೇಳಿದೆ: ಪ್ರಾಂತೀಯ ಮಂಡಳಿಯು ತೀರ್ಮಾನಿಸಿದರೆ ಜಿಲ್ಲಾ ಸಮಿತಿ ಮತ್ತು ಶಾಖೆಗಳ ನಡುವೆ ತಾಲೂಕ್, ಸಬ್ ಡಿವಿಷನ್, ಹೋಬಳಿ ಅಥವಾ ನಗರ ಸಮಿತಿಗಳನ್ನು ರಚಿಸಬಹುದು. ಪ್ರಾಂತೀಯ ಕಾರ್ಯಕಾರಿ ಸಮಿತಿಯ ತೀರ್ಮಾನ ಪಡೆದರೆ ಸ್ಥಳೀಕ ಮಂಡಳಿಗಳನ್ನು ಸೆಕ್ರೆಟೇರಿಯಟನ್ನು ಚುನಾಯಿಸಬಹುದು. ಸ್ಥಳೀಕ ಸಮಿತಿಯು ತಿಂಗಳಿಗೊಂದು ಸಲ ಸೇರುವುದು.

೨೬. ಮೂಲ ಘಟಕ:

1. ಪಾರ್ಟಿ ಶಾಖೆಯು ಪಾರ್ಟಿಯ ಮೂಲ ಅಥವಾ ಪ್ರಾಥಮಿಕ ಘಟಕವಾಗಿದೆ.

2. ಮೂಲ ಘಟಕದ ಅತ್ಯುಚ್ಚ ಅಂಗವೆಂದರೆ ಶಾಖೆಯ ಸರ್ವಸದಸ್ಯರ ಸಭೆ.

3. ಜನತೆಯೊಂದಿಗೆ ನೇರವಾದ ದೈನಂದಿನ ಸಂಪರ್ಕವನ್ನಿಡುವುದು ಮತ್ತು ತನ್ನ ಕ್ಷೇತ್ರದಲ್ಲಿ ಪಾರ್ಟಿ ಚಟುವಟಿಕೆಯನ್ನು ಸಂಘಟಿವುದಸು ಶಾಖೆಯ ಜವಾಬ್ದಾರಿಯಾಗಿದೆ.

4. ತನ್ನ ಕೆಲಸಕ್ಕೆ ಮತ್ತು ಸಾಮೂಹಿಕ ಚಟುವಟಿಕೆಗೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳನ್ನೂ ಶಾಖೆಯು ಚರ್ಚಿಸಿ ಯೋಗ್ಯವಾದ ಪ್ರಾಯೋಗಿಕ ತೀರ್ಮಾನಗಳನ್ನು ಮಾಡತಕ್ಕದು.

5. ಶಾಖೆಯ ಸದಸ್ಯರನ್ನು ಅನುಕೂಲವಾದ ಪ್ರಮಾಣದಲ್ಲಿ ಗುಂಪುಗಳನ್ನಾಗಿ ವಿಭಜಿಸಬಹುದು. ಪ್ರತಿ ಗುಂಪಿಗೊಬ್ಬ ಸಂಚಾಲಕನಿರಬೇಕು.

6. ಸದಸ್ಯರಿಗೆ ಕೆಲಸ ಹಂಚುವುದು ಮತ್ತು ಚೆಕ್ ಅಪ್ ಮಾಡುವುದು ಗುಂಪಿನ ಕರ್ತವ್ಯ. ಶಾಖೆಯಲ್ಲಿ ರಾಜಕೀಯ ಚರ್ಚೆಯು ಸುಗಮವಾಗುವಂತೆ ಮಾಡಲು ಗುಂಪುಗಳಲ್ಲಿ ಚರ್ಚಿಸಬಹುದು.

7. ಹಳ್ಳಿ, ಪಂಚಾಯಿತಿ, ಮುನಿಸಿಪಲ್ ವಾರ್ಡ್, ಬೀದಿ, ಮೊಹಲ್ಲಾ, ಕಾರ್ಖಾನೆ, ಉದ್ಯೋಗ ಮತ್ತು ಸಂಸ್ಥೆಗಳ ಆಧಾರದ ಮೇಲೆ ಪಾರ್ಟಿಯ ಶಾಖೆಗಳನ್ನು ರಚಿಸುವುದು. ಶಾಖೆಯ ಪರಮಾವಧಿ ಸದಸ್ಯತ್ವವನ್ನು ಪ್ರಾಂತೀಯ ಕಾರ್ಯಕಾರಿ ಸಮಿತಿಯು ತೀರ್ಮಾನಿಸುವುದು.

8. ಶಾಖೆಯ ಕೆಲಸಗಳು:

(a) ಮೇಲಿನ ಸಮಿತಿಯ ನಿರ್ದೇಶನಗಳನ್ನು ಜಾರಿಗೆ ತರುವುದು.

(b) ಪಾರ್ಟಿಯ ರಾಜಕೀಯ ಮತ್ತು ಸಂಘಟನಾತ್ಮಕ ತೀರ್ಮಾನಗಳಿಗೆ ತನ್ನ ಪ್ರದೇಶದ ಅಥವಾ ಚಟುವಟಿಕೆಯ ಕ್ಷೇತ್ರದಲ್ಲಿ ಜನತೆಯನ್ನು ಒಪ್ಪಿಸುವುದು.

(c) ತನ್ನ ಪ್ರದೇಶದ ಅಥವಾ ಕೆಲಸದ ಕ್ಷೇತ್ರದಲ್ಲಿ ಸಾಮೂಹಿಕ ಸಂಘಟನೆಗಳನ್ನು ಕಟ್ಟುವುದು ಮತ್ತು ಅವುಗಳಲ್ಲಿ ಭಾಗವಹಿಸುವುದು.

(d) ಪಾರ್ಟಿ ಪತ್ರಿಕೆಗಳನ್ನೂ, ಪ್ರಕಾಶನಗಳನ್ನೂ ಮಾರುವುದು.

(e) ಪಾರ್ಟಿ ಸದಸ್ಯತನದ ಶುಲ್ಕವನ್ನೂ, ಪಾರ್ಟಿಗೆ ನಿಧಿಯನ್ನು ವಸೂಲು ಮಾಡುವುದು.

(f) ಹಿತೈಷಿಗಳನ್ನೂ, ಸಮರಶೀಲ ಕಾರ್ಯಕರ್ತರನ್ನು ಪಾರ್ಟಿಗೆಳೆಯುವುದು ಮತ್ತು ಅವರಿಗೆ ಶಿಕ್ಷಣ ಕೊಡುವುದು, ಅನಕ್ಷರಸ್ಥ ಪಾರ್ಟಿ ಸದಸ್ಯರನ್ನು ಅಕ್ಷರಸ್ಥರನ್ನಾಗಿ ಮಾಡುವುದು.

(g) ದೈನಂದಿನ ಸಂಘಟನಾ ಮತ್ತು ಚಳುವಳಿಯ ಕೆಲಸದಲ್ಲಿ ಮೇಲಿನ ಸಮಿತಿಗೆ ಸಹಾಯ ನೀಡುವುದು.

9. ತನ್ನ ಪ್ರಚಲಿತ ಕೆಲಸಗಳನ್ನು ನಡೆಸಲು ಶಾಖೆಯು ಸರ್ವ ಸದಸ್ಯರ ಸಭೆಯಲ್ಲಿ ಕಾರ್ಯದರ್ಶಿ ಮತ್ತು ಉಪಕಾರ್ಯದರ್ಶಿಯನ್ನಾರಿಸುವುದು. ಶಾಖೆಯಲ್ಲಿ 25ಕ್ಕಿಂತ ಹೆಚ್ಚು ಸದಸ್ಯರಿದ್ದರೆ ಕಾರ್ಯದರ್ಶಿ ಮತ್ತು ಉಪಕಾರ್ಯದರ್ಶಿಯನ್ನೊಳಗೊಂಡ ಶಾಖಾ ಸಮಿತಿಯನ್ನಾರಿಸುವುದು.

10. ಶಾಖೆಯ ಸರ್ವಸದಸ್ಯರ ಸಭೆಯು ತಿಂಗಳಿಗೊಂದಾವರ್ತಿಯಾದರೂ ಸೇರಿ ಅದರಲ್ಲಿ ಶಾಖಾ ಸಮಿತಿಯು ಅಥವಾ ಕಾರ್ಯದರ್ಶಿಯು ತಾವು ಮಾಡಿದ ಕೆಲಸದ ಬಗ್ಗೆ ವರದಿಯನ್ನೂ ಮತ್ತು ತಮ್ಮ ಸಲಹೆಗಳನ್ನು ಕೊಡುವುದು.

11. ತನ್ನ ಮೇಲಣ ಪಾರ್ಟಿ ಅಂಗದ ಸಮ್ಮೇಳನಕ್ಕೆ ಶಾಖೆಯ ಸರ್ವಸದಸ್ಯರ ಸಭೆಯು ಪ್ರತಿನಿಧಿಗಳನ್ನಾರಿಸತಕ್ಕದ್ದು.

12. ಶಾಖೆಯ ಕಾರ್ಯದರ್ಶಿಯು ಉಮೇದುವಾರ ಸದಸ್ಯರು ಮತ್ತು ಪೂರ್ಣ ಸದಸ್ಯರನ್ನು ಮಾಡಿದ ಬಗ್ಗೆ ಎರಡು ತಿಂಗಳಿಗೊಂದು ಸಲ ತನ್ನ ಮೇಲಿನ ಸಮಿತಿಗೂ, ಜಿಲ್ಲಾ ಸಮಿತಿಗೂ ವರದಿಕೊಡಬೇಕು.

13. ತನ್ನ ಕೆಲಸದ ಅಥವಾ ವಾಸದ ಸ್ಥಳಗಳ ಶಾಖೆಯಲ್ಲಿ ಪಾರ್ಟಿ ಸದಸ್ಯನಾಗಿದ್ದವನನ್ನು ತನ್ನ ವಾಸದ ಅಥವಾ ಕೆಲಸದ ಸ್ಥಳಗಳ ಘಟಕಗಳಲ್ಲಿ ಸಹ-ಸದಸ್ಯನನ್ನಾಗಿ, ಅವಶ್ಯವಿದ್ದ ಕಡೆಯಲ್ಲಿ, ಸೇರಿಸಿಕೊಳ್ಳಬಹುದು. ಅದರಲ್ಲಿ ಮತ ಕೊಡುವ ಅಧಿಕಾರ ಮಾತ್ರವಿಲ್ಲ.

೨೭. ಕೇಂದ್ರ ಕಂಟ್ರೋಲ್ ಕಮಿಷನ್:

ಕೇಂದ್ರ ಕಂಟ್ರೋಲ್ ಕಮಿಷನ್ ಅನ್ನು ಪಾರ್ಟಿ ಅಧಿವೇಶನದಲ್ಲಿ ಆರಿಸಲಾಗುವುದು. ಅದರ ಸದಸ್ಯ ಹತ್ತು ವರ್ಷಕ್ಕಿಂತ ಕಡಿಮೆ ಪಾರ್ಟಿ ಸದಸ್ಯನಾಗಿರದೆ, ಅವರ ಪಾರ್ಟಿ ಸಂಘಟನೆಯ ಅನುಭವ ಮತ್ತು ವೈಯಕ್ತಿಕ ಪ್ರಾಮಾಣಿಕತೆಯನ್ನೂ ಗಣನೆಗೆ ತೆಗೆದುಕೊಳ್ಳತಕ್ಕದ್ದು. ಕಮಿಷನ್‌ನ ಜವಾಬ್ದಾರಿಯನ್ನು ಈ ವಿಭಾಗದಲ್ಲಿ ವಿವರಿಸಲಾಗಿದೆ.

೨೮. ಇದರಲ್ಲಿ ಪ್ರಾಂತೀಯ ಕಂಟ್ರೋಲ್ ಕಮಿಷನ ವಿಷಯ ತಿಳಿಸಿದೆ.

—(ಮುಂದುವರಿಯುವುದು)—

ಮಾರ್ಚಿ 27ರ ಕೇಳಿಕೆಗಳ ಚಾರ್ಟರ್

1. ಬಹಳ ಹಿಂದಿನಿಂದಲೂ 'ನ್ಯಾಯ ವೇತನ' ಕೊಡುತ್ತೇವೆಂದು ಮಾಡಿರುವ ಆಶ್ವಾಸನೆಯ ಮೇರೆಗೆ, ತಕ್ಷಣ ತಾತ್ಕಾಲಿಕ ಪರಿಹಾರ ರೂಪದಲ್ಲಿ, ಎಲ್ಲಾ ಸಂಘಟಿತ ಉದ್ಯಮದಲ್ಲಿಯೂ ಶೇಕಡಾ 25ರಷ್ಟು ವೇತನ ಭಡತಿಯಾಗಬೇಕು. ಇನ್ನುಳಿದ ಕೈಗಾರಿಕೆಗಳಲ್ಲಿ ನ್ಯಾಯವಾದ ಕನಿಷ್ಟ ವೇತನ ಸಿಗುವಂತಾಗಬೇಕು.

2. ಜೀವನ ವೆಚ್ಚದ ಮಟ್ಟಕ್ಕೆ ಸಂಬಂಧಪಟ್ಟ ತುಟ್ಟಿಭತ್ತೆ ಮತ್ತು ಮೂಲ ಸಂಬಳವನ್ನು ಕೂಡಲೇ ಒಂದುಗೂಡಿಸಬೇಕು.

3. ಅಸಾಮಾನ್ಯವಾದ ಬೆಲೆಗಳ ಏರಿಕೆಯನ್ನು ತಡೆಗಟ್ಟಲು, ಲಾಭಕೋರರು, ದಾಸ್ತಾನುಕಾರರು ಹಾಗೂ ಇನ್ನಿತರ ಸಮಾಜ ವಿರೋಧಿಗಳ ಮೇಲೆ ಉಗ್ರವಾದ ಕ್ರಮ ವಹಿಸಬೇಕು; ಅತ್ಯಗತ್ಯ ನಿತ್ಯ ಬಳಕೆಯ ವಸ್ತುಗಳ ಮೇಲೆ ಮೌಲ್ಯದ ಕಂಟ್ರೋಲ್ ಇರಬೇಕು.

4. ದಿನ ಕೂಲಿಯ ಕೆಲಸಗಾರರಿಗೆ ವಾರಾಂತ್ಯದ ರಜಾದಿನದ ಸಂಬಳ ನೀಡಬೇಕು; ಈ ಸಂಬಳವು, ಹಿಂದಿನ ವಾರದ ಆದಾಯದ ಸರಾಸರಿಯ ಆಧಾರದ ಮೇಲೆ, ಕನಿಷ್ಟವಾಗಿ ದಿನಕೂಲಿಯ ಎರಡರಷ್ಟು ಆಗಿರಬೇಕು.

5. ಇಪ್ಪತ್ತು ಮಂದಿಗಿಂತ ಹೆಚ್ಚು ನೌಕರರನ್ನುಳ್ಳ ಎಲ್ಲಾ ಕೈಗಾರಿಕೆ ಹಾಗೂ ಕ್ಷೇತ್ರಕ್ಕೆ ನೌಕರರ ಪ್ರಾವಿಡೆಂಟ್ ಫಂಡ್ ಆ್ಯಕ್ಟನ್ನು ಲಗತ್ತಿಸಬೇಕು ಮತ್ತು ಇವಕ್ಕೆ ನೀಡುತ್ತಿರುವ ಕಂಟ್ರಿಬ್ಯೂಷನ್ ಅನ್ನು ಒಟ್ಟು ಆದಾಯದ ಶೇಕಡ 8⅓ಕ್ಕೆ ಏರಿಸಬೇಕು, ಹಾಗೂ ಈ ಪ್ರಾವಿಡೆಂಟ್ ಫಂಡ್ ಆ್ಯಕ್ಟಿನಲ್ಲಿರುವ ನ್ಯೂನತೆಗಳ ತಿದ್ದುಪಡಿಯಾಗಬೇಕು.

6 ಗುಪ್ತ ಮತದಾನದ ಮೂಲಕ ಸಂಘದ ಪ್ರತಿನಿಧಿತ್ವವನ್ನು ನಿರ್ಧರಿಸಿ, ಅದನ್ನು ಅಂಗೀಕರಿಸುವುದು.

7. ಸರಕಾರದ ಮತ್ತು ಸರಕಾರದ ನೇತೃತ್ವದಲ್ಲಿರುವ ಹಾಗೂ ಸ್ಥಳೀಯ ಸರಕಾರೀ ಕೆಲಸದಲ್ಲಿರುವ ನೌಕರರಿಗೆ ಸಂಬಂಧಿಸಿದ ನಡವಳಿಕೆಯ ನಿಯಮಾವಳಿಗಳ ತಿದ್ದುಪಡಿಯಾಗಬೇಕು, ಮತ್ತು ಎಲ್ಲಾ ತೆರನ ನೌಕರರಿಗೆ ಪೂರ್ತಿ ಟ್ರೇಡ್ ಯೂನಿಯನ್ ಹಾಗೂ ಪ್ರಜಾಪ್ರಭುತ್ವ ಹಕ್ಕುಗಳಿದ್ದು, ಅವರಿಗೆ ಶಾಂತಿಯುತವಾದ ಪ್ರತ್ಯೋಭೆ, ಪ್ರದರ್ಶನ ಹಾಗೂ ಮುಷ್ಕರಗಳಲ್ಲಿ ಭಾಗವಹಿಸುವ ಹಕ್ಕಿರಬೇಕು.

8 ಗನಿಯ ಸುರಕ್ಷತೆ ನಿಯಮಗಳನ್ನು ಜಾರಿಗೊಳಿಸುವ ಜವಾಬುದಾರಿ ಇನ್‌ಸ್ಪೆಕರೇಟ್ ಸ್ಟಾಫಿನ ಮೇಲೆ ಮಾತ್ರ ಇದೆ. ಕಾರ್ಮಿಕ ಪ್ರತಿನಿಧಿಗಳ ಸಹಕಾರವನ್ನೂ ಇದು ಹೊಂದಿರಬೇಕು.

9. ಸಂಬಳ ಸಹಿತ ಹಬ್ಬದ ರಜಾ ದಿನಗಳು.

10. ನೌಕರರ ರಾಜ್ಯ ವಿಮಾ ಯೋಜನೆಯಲ್ಲಿನ ನ್ಯೂನತೆಗಳ ಪರಿಹಾರ ಮತ್ತು ಇದರಲ್ಲಿ ವಿಮಾ ಪಡೆದವರ ಕುಟುಂಬ ಇಲ್ಲವೇ ಆಶ್ರಯದಾತರಿಗೆ ಈ ವಿಮೆಯ ಲಾಭ ಸಿಗುವಂತೆ ಮಾಡಬೇಕು ಸರಕಾರಿ ಕಟ್ಟಡಗಳನ್ನು ಕಟ್ಟುವ ಯೋಜನೆಗಿಂತಲೂ ಮುಖ್ಯವಾಗಿ ಈ ವಿಮಾ ಯೋಜನೆ ಪ್ರಕಾರ ಆಸ್ಪತ್ರೆಗಳನ್ನು ಹೆಚ್ಚಾಗಿ ಕಟ್ಟಬೇಕು.

11. ಸಣ್ಣ ಮಟ್ಟದ ಕೈಗಾರಿಕೆ ಮತ್ತಿತರ ಸಂಘಟಿತ ಉದ್ಯಮದಲ್ಲಿನ ಕೆಲಸಗಾರರಿಗೆ ರಕ್ಷಣೆಯ ಭದ್ರತೆಯೊಯಬೇಕು.

12. ಎಲ್ಲಾ ತೋಟಗಳು ಮತ್ತು ಗನಿ ಹಾಗೂ ಎಸ್ಟೇಟುಗಳಲ್ಲಿನ ಮಾರ್ಗ ಮತ್ತು ಮನೆಯ ಸ್ಥಳಗಳನ್ನು ಸರಕಾರ ವಹಿಸಿಕೊಂಡು ಅದು 'ಸ್ವತಂತ್ರ ಕ್ಷೇತ್ರ'ವೆಂದು ಸಾರಬೇಕು. ಹೀಗಾದಲ್ಲಿ ಇಲ್ಲಿ ಕಾರ್ಮಿಕರಿಗೆ ತಾವು ಟ್ರೇಡ್ ಯೂನಿಯನಿಸ್ಟ್ ಹಾಗೂ ಸ್ವತಂತ್ರ ನಾಗರಿಕರೆಂದೆನಿಸುವ ಹಕ್ಕುಗಳನ್ನು ಚಲಾಯಿಸಲು ಸಾಧ್ಯವಾಗುವುದು.

13. ಸರಕಾರದ ಕೈಗಾರಿಕಾ ಮತ್ತು ಕೈಗಾರಿಕೇತರ ನೌಕರರೊಳಗಿನ ಭೇದವನ್ನು ತೊಡೆದ ಹಾಕಬೇಕು.

14. ಈ ಕೆಳಗೆ ಹೇಳಲಾದ ಕೈಗಾರಿಕೆಯಲ್ಲಿ ವೇಜ್ ಬೋರ್ಡಿನ ನೇಮಕವಾಗಬೇಕು: (a) ಜೂಟ್, (b) ಪ್ಲಾಂಟೇಷನುಗಳು, (c) ಕಲ್ಲಿದ್ದಲು ಬಿಟ್ಟು ಇತರ ಗನಿಗಳು, (d) ಇಂಜಿನೀಯರಿಂಗ್, (e, ಕಬ್ಬಿಣ ಮತ್ತು ಉಕ್ಕು (f) ಕೆಮಿಕಲ್ಸ್, (g) ಸಿಮೆಂಟು, (h) ರೇವುಗಳು.

ಮಾರ್ಚಿ 27 ಕಾರ್ಮಿಕರ ರಾಷ್ಟ್ರೀಯ ಪ್ರದರ್ಶನ

(೩ನೇ ಪುಟದಿಂದ)

ಸರ್ವಾಧಿಕಾರಕ್ಕೆ ಎಣೆಯಿಲ್ಲ. ಹತ್ತಿ ಗಿರಣಿಗಳಲ್ಲಿ ಯಾವಾಗಲೂ ಬಿಕ್ಕಟ್ಟು ಉಂಟುಮಾಡುವುದೇ ಮಾಲೀಕರ ರೂಢಿಯಾಗಿದೆ. ಸರಕಾರದ ಮೇಲೆ ಇವರ ಪ್ರಭಾವ ಕೂಡಾ ಸಾಕಷ್ಟಿದೆ.

ಇಂಥಾ ಸಂದರ್ಭದಲ್ಲಿ ಕಾರ್ಮಿಕ ವರ್ಗ ರಾಷ್ಟ್ರೀಯವಾಗಿ ಪ್ರದರ್ಶನ ನಡೆಸಲೇಬೇಕು ಇದು ಯಶಸ್ವಿಯೂ ಆಗುವುದು ಆಗದಿದ್ದಲ್ಲಿ.... ಇನ್ನಿತರ ರೀತಿನೀತಿಗಳು ಇವೆ. ಒಂದು ದಿನದ ರಾಷ್ಟ್ರವ್ಯಂತ ಸಾಂಕೇತಿಕ ಮುಷ್ಕರ ಮಾಡಬೇಕು. ಮಾಲಿಕರು ಚಂಡಿತನ ಬಿಡದಿದ್ದರೆ ಇದೇ ದಾರಿ ತಾನೆ!

ಹೀಗೆಲ್ಲಾ ನಡೆಸಿದರೆ ನಾವು ಯೋಜನೆಗೆ ಬೆಂಬಲವೀಯುವ ನಮ್ಮ ಧೋರಣೆಗೆ ಅನುವಾಗಿ ಹೋದಂತಾಗುವುದೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಹೌದು, ನಾವು ರಾಷ್ಟ್ರದ ಆರ್ಥಿಕ ಅಭಿವೃದ್ಧಿ ಬಯಸುತ್ತೇವೆ ಆದು ಜನತೆಯ ಆರ್ಥಿಕವಾಗಬೇಕೆನ್ನುತ್ತೇವೆ. ರಾಷ್ಟ್ರದ ಆರ್ಥಿಕ ಅಥವಾ ಯೋಜನೆಯ ಹೆಸರಿನಲ್ಲಿ ಕಾರ್ಮಿಕ ವರ್ಗದ ಹಿತವನ್ನು ತುಳಿಯುವುದನ್ನು ನಾವು ಬಿಡಲಾರೆವು. ಈ ಎರಡೂ ಹಾಲು ನೀರಿನಂತೆ ಬೆರೆತಿರಬೇಕು!

ಆದುದರಿಂದ ನಮ್ಮ ಎಲ್ಲಾ ಟ್ರೇಡ್ ಯೂನಿಯನ್‌ಗಳು ಮಾರ್ಚಿ 27ನ್ನು ಪ್ರಚಂಡವಾಗಿ ಆಚರಿಸಬೇಕು. ಮಿಲಿಯ ಗಟ್ಟಲೆ ಕಾರ್ಮಿಕರನ್ನು ಸಂಘಟಿಸಿ, ಪ್ರದರ್ಶನ ನಡೆಸಿ ಕಾರ್ಮಿಕ ವರ್ಗದ ಶಕ್ತಿಯನ್ನು ತೋರಿಸಬೇಕು. ಕೇಳಿಕೆಯ ಚಾರ್ಟರನ್ನು ವಿಧಾನ ಸಭೆಗಳಿಗೆ ಮೆರವಣಿಗೆಯಲ್ಲಿ ಹೋಗಿ ನೀಡಬೇಕು. ಮೆರವಣಿಗೆ ಶಾಂತ ಹಾಗೂ ಸುಸಂಘಟಿತವಾಗಿರಬೇಕು.

ಪ್ರತಿ ರಾಜಧಾನಿಯಲ್ಲೂ ನಡೆಯುವ ಪ್ರದರ್ಶನಗಳು ಎಲ್ಲಾ ಸಂಸ್ಥೆಗಳನ್ನು ಪ್ರತಿನಿಧಿಸುವ ಸಂಯುಕ್ತ ಕ್ರಿಯಾ ಸಮಿತಿಯನ್ನು ಚುನಾಯಿಸಲಿ.

ಪ್ರತಿ ಪ್ರದರ್ಶನವು ಚಾರ್ಟರನ್ನು ಮುಂದಿಡಲು ಒಂದು ಸಮಿತಿಯನ್ನು ರಚಿಸಲಿ. ಪ್ರತಿ ಸಮಿತಿಯಲ್ಲಿ ಮೂರು ರಾಷ್ಟ್ರೀಯ ಕೇಂದ್ರಗಳ ಮತ್ತು ರಾಷ್ಟ್ರೀಯ ಫೆಡರೇಷನ್‌ಗಳ ಪ್ರತಿನಿಧಿಗಳಿರಲಿ.

ರಾಷ್ಟ್ರದ ಪ್ರಗತಿಗಾಗಿ, ಕಾರ್ಮಿಕ ವರ್ಗ ಮತ್ತು ಜನತೆಯ ಹಕ್ಕು-ಬಾಧ್ಯತೆಗಳಿಗಾಗಿ, ಸರಕಾರ ಮತ್ತು ಮಾಲಿಕರಲ್ಲಿರುವ ಲಂಚಗುಳಿತನ ಮತ್ತು ಸರ್ವಾಧಿಕಾರದ ವಿರುದ್ಧವಾಗಿ, ಕಾರ್ಮಿಕ ವರ್ಗ ಮತ್ತು ಅದರ ಹಕ್ಕುಗಳತ್ತ ಪ್ರಗತಿದಾಯಕವಾದ ನೀತಿಗಾಗಿ, ಸೂಕ್ತವಾಗಿ ಘೋಷಣೆಗಳನ್ನು ಪ್ರದರ್ಶನ ಮೊಳಗಿಸಲಿ.

ನಮ್ಮ ದೇಶ ಮತ್ತು ನಮ್ಮ ವರ್ಗಕ್ಕಾಗಿ ನಾವೆಲ್ಲಾ ಒಂದುಗೂಡೋಣ!

ಓದುಗರ ಓಲೆ

ವಿದ್ಯಾ ಇಲಾಖೆಯ ಅಧಿಕಾರಿಗಳು ಗಮನಿಸುವರೆ !

ಇದೇ ತುಮಕೂರು ಜಿಲ್ಲೆಗೆ ಸೇರಿದ ಪಾವಗಡದಲ್ಲಿ ಒಂದು ಪುರ ಪ್ರಾಢಶಾಲೆಯಿದ್ದು ಇದುವರೆಗೂ ಉತ್ತಮ ಶ್ರೇಣಿಯ ಶಾಲೆಯಾಗಿದ್ದು ಇತ್ತೀಚೆಗೆ ದುರಾದೃಷ್ಟವಶಾತ್ ಸಾರ್ವಜನಿಕರ ಗಮನವನ್ನು ಸೆಳೆಯುವ ಶೋಚನೀಯ ಪರಿಸ್ಥಿತಿಗೆ ಇಳಿಸಿರುವುದು ವಿಷಾದ ಪೂರ್ವಕವಾಗಿದೆ. ಇದಕ್ಕೆ ಉಪಾಧ್ಯಾಯರೇ ಹೊಣೆಯೆಂದ ಅವರನ್ನು ಕಮ್ಮಿ ಸಂಬಳ ಕೊಟ್ಟು ಈ ದಿಶೆಗೆ ಇಳಿಸಿದ ಸರಕಾರವೇ ಹೊಣೆಯೆನ್ನಬೇಕಾಗಿದೆ. ಹಲವು ಉಪಾದ್ಯಾಯರುಗಳು ವಿದ್ಯಾರ್ಥಿಗಳಲ್ಲಿ ಜಾತೀಯತೆಯನ್ನು ಕಲ್ಪಿಸಿ ಮತ್ತು ತಮ್ಮ ಸ್ವಂತ ಪ್ರಭಾವದಿಂದ ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನೊಳಗೊಂಡ ಖಾಸಗೀ ಶಾಲೆಗಳನ್ನೋ ತಮ್ಮ ಮನೆಗಳಲ್ಲಿ ನಡೆಸುತ್ತಿದ್ದು ತಮ್ಮ ಸ್ವರಕ್ಷಣೆ ಮತ್ತು ಸಂಪಾದನೇ ಶ್ರೇಯವಾಗಿಟ್ಟುಕೊಂಡು ತಾವು ಕೈಗೊಂಡಿರುವ ವೃತ್ತಿ ಹಾಗೂ ಪವಿತ್ರ ಸಂಸ್ಥೆಯ ಹೆಸರಿಗೆ ಕಳಂಕವನ್ನು ತರುವವರಾಗಿರುತ್ತಾರೆ. ಈ ರೀತಿ ಟ್ಯೂಷರ್ ಇಟ್ಟುಕೊಳ್ಳುವುದರಲ್ಲಿ ಸರ್ಕಾರಿ ನಿಯಂತ್ರಣವಿಲ್ಲವೇ? ಇವರ ಪರಿಣಾಮ ಯಾವ ರೀತಿ ಎಂಬುದು ಸರ್ಕಾರಕ್ಕೆ ಗೊತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ತಟಸ್ಥರಾಗಿರಲು ಕಾರಣವೇನು?

ಕೆಲವು ಉಪಾಧ್ಯಾಯರುಗಳು ಸ್ಥಳದವರೇ ಆಗಿದ್ದು ತಮ್ಮ ವ್ಯಕ್ತಿ ಪ್ರಭಾವದಿಂದ ಇದೇ ರೀತಿಯ ಸಂಪಾದನೆಯಲ್ಲಿ ನಿರತರಾಗಿದ್ದಾರೆ.

ಹಾಲಿ ಇರುವ ಮುಖ್ಯೋಪಾಧ್ಯಾಯರು ನಿವೃತ್ತರಾಗುವ ವೇಳೆಯಲ್ಲಿರುವುದರಿಂದಲೂ ಮತ್ತು ಮುಪ್ಪಿನಲ್ಲಿರುವುದರಿಂದ ತರುಣ ಉಪಾಧ್ಯಾಯರುಗಳು ಮತ್ತು ವಿದ್ಯಾರ್ಥಿಗಳು ಮುಖ್ಯೋಪಾಧ್ಯಾಯರ ಒಳ್ಳೆಯತನವನ್ನು ದುರುಪಯೋಗಪಡಿಸಿಕೊಂಡಿರುವುದೇ ಇಷ್ಟಕ್ಕೆ ಕಾರಣವಾಗಿದೆ. ಸ್ಕೂಲಿನಲ್ಲಿರುವ ಹಲವು ನೌಕರರು ತಮ್ಮ ವೃತ್ತಿಯಲ್ಲಿ ಆಸಕ್ತರಾಗದೆ ಹಾಜರಿರಬೇಕಾದ ವೇಳೆಯಲ್ಲೂ ಸಹ ಇರದೆ ತಮ್ಮ ಖಾಸಗಿ ವೃತ್ತಿಗಳಲ್ಲಿ ನಿರತರಾಗಿರುತ್ತಾರೆ.

ಸ್ಕೂಲು ಟೌನಿಗೆ ದೂರದ ಬಡಾವಣೆಯಲ್ಲಿರುವುದರಿಂದ ಈ ವಿದ್ಯಮಾನಗಳು ಇದುವರೆಗೂ ಅಜ್ಞಾತವಾಗಿದ್ದವು. ಆದರೆ ಇತ್ತೀಚೆಗೆ ಶಾಲೆಯಲ್ಲಿ ಕೆಲವು ವಿಷಾದಕರವಾದ ಹಗರಣಗಳು ನಡೆದು ವಾಸ್ತವ ಪರಿಸ್ಥಿತಿಯು ಸಾರ್ವಜನಿಕರಿಗೆ ಗೋಚರವಾಗಿದೆ. ಉಪಾಧ್ಯಾಯರಲ್ಲಿನ ವೈಷಮ್ಯ ಹಾಗೂ ವಿದ್ಯಾರ್ಥಿಗಳಲ್ಲಿನ ಪಕ್ಷಗಳ ದೆಸೆಯಿಂದ ಅನೇಕ ಅಶಿಸ್ತಿನ ಪ್ರಚೋದನೆಗಳು ನಡೆದು ಪ್ರಾಮಾಣಿಕರಾಗಿ ಕೆಲಸ ಮಾಡುವ ಉಪಾಧ್ಯಾಯರುಗಳಿಗೆ ನಿರಾಶೆಯಾಗಿದೆ.

ವರ್ಷಾಂತ್ಯದಲ್ಲಿ ಇನ್ಸ್‌ಪೆಕ್ಷನ್ ನಡೆಸಿದ ಅಧಿಕಾರಿಗಳು ಈ ವಿಚಾರದಲ್ಲಿ ತಟಸ್ಥರಾಗಿರುವುದು ಪರಿಸ್ಥಿತಿಯನ್ನು ಉಲ್ಬಣವಾಗಿಸಿದೆ ಈ ಶಾಲೆಯಲ್ಲಿ ಸಹವಿದ್ಯಾಭ್ಯಾಸವಿರುವುದರಿಂದ ಕೆಲವು ಪುಂಡ ವಿದ್ಯಾರ್ಥಿಗಳು ಪ್ರೋತ್ಸಾಹಿತರಾಗಿ ವಿದ್ಯಾರ್ಥಿನಿಯರ ವಿಚಾರದಲ್ಲಿ ಕ್ಲಾಸ್ ರೋಮಿಯೋಗಳು ಹಾಗೂ ರೋಡ್ ರೋಮಿಯಾಗಳಾಗಿದ್ದು ನಿಷೇಧಿಸಲ್ಪಟ್ಟ ವರ್ತನೆಗಳು ಸಲೀಸಾಗಿ ನಡೆಯುತ್ತಲಿವೆ.

ಈ ಟ್ಯೂಷರ್‌ಗಳ ಪ್ರಭಾವದಿಂದ ಮತ್ತು ಉಪಾಧ್ಯಾಯರಲ್ಲಿನ ವೈಷಮ್ಯಗಳಿಂದ ಮುಂದೆ ನಡೆಯುವ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳಿಗೆ ನಿಷ್ಪಕ್ಷಪಾತವಾದ ಫಲಿತಾಂಶಗಳು ದೊರೆಯುತ್ತದೆಯೇ ಎಂಬ ಶಂಕೆಯಾಗಿದೆ.

ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ವಿಚಾರದಲ್ಲಿ ಅತಿ ಶೀಘ್ರವಾಗಿ ವಿಚಾರಣೆ ನಡೆಸಿ, ಸೂಕ್ತ ಕಾರ್ಯಕ್ರಮ ಕೈಗೊಂಡು ಮುಂದೆ ಸಂಭವಿಸಬಹುದಾದ ಅನಾಹುತಗಳನ್ನೂ ತಪ್ಪಿಸುವುದಲ್ಲದೆ ಶಾಲೆಯ ಘನತೆ ಮತ್ತು ಗೌರವಗಳನ್ನು ಉಳಿಸಬೇಕಾಗಿ ಪ್ರಾರ್ಥನೆ.

ಇತಿ

ಶಾಲಾಹಿತೈಷಿ, ಪೋಷಕ.

ಬಿಜಾಪುರ ಪೋಲೀಸರ ಕಸ್ಟಡಿಯಲ್ಲಿ ಸಾವು?

ತಾ. 9-3-58ನೇ ದಿವಸ ಬಜಾಪುರ ಸಿಟಿ ಪೋಲೀಸರ ತಾಬೆಯೊಳಗಿದ್ದ ಯಲ್ಲಪ್ಪ ಎಂಬವನು ಸತ್ತಿರುವನೆಂದು ತಿಳಿದು ಬರುತ್ತದೆ. ಯಲ್ಲಪ್ಪನ ತಂದೆಯಾದ ಹನುಮಂತಪ್ಪ ಮಾದಪ್ಪ ಮುಸೂತಿಯವನು ಕಮ್ಯೂನಿಸ್ಟ್ ಪಾರ್ಟಿಗೆ ಬರೆದ ತಕರಾರು ಅರ್ಜಿಯಲ್ಲಿ, "ನಾನು ಗವರ್ನ್‌ಮೆಂಟ್ ಪೋಲೀಸ್ ಖಾತೆಯಲ್ಲಿ ನವಕರಿ ಮಾಡಿದ್ದು, ಈಗ ಸರಕಾರದಿಂದ ಪೆಂಶನ್ ಪಡೆದುಕೊಂಡಿರುತ್ತೇನೆಂದೂ, ತಾರೀಖು 8-3-58ನೇ ದಿವಸ ಸಿಟಿ ಪೋಲೀಸರು ಮತ್ತು ಫೌಜದಾರರು ಸಂಜೆ ಹೊತ್ತಿಗೆ ತನ್ನ ಮನೆಗೆ ಬಂದು ಮನೆ ಜಪ್ತಿ ಮಾಡಿದರೆಂದು ಮನೆಯಲ್ಲಿ ಯಾವುದೇ ಗುನ್ಹೆ ಮಾಲುಗಳು ಸಿಗಲಿಲ್ಲವೆಂದೂ, ಮುಂದೆ ತನ್ನ ಮಗನಾದ ಯಲ್ಲಪ್ಪನನ್ನು ತಗೊಂಡು ಕಛೇರಿಗೆ ಹಾಜರಮಾಡಂತ ಹೇಳಿದರೆಂದೂ, ಅವರಂತೆ ತಾನು 9-3-58ಕ್ಕೆ ಮುಂಜಾನೆ ಮಗನನ್ನು ಫೌಜದಾರರ ಕಡೆಗೆ ಹಾಜರಮಾಡಿದನೆಂದೂ ಹೇಳಿರುವನು. ಮುಂದೆ ಒಂದು ಗಂಟೆಯನಂತರ ನನ್ನ ಮಗನನ್ನು ಬಿಡುಗಡೆ ಮಾಡಲಾಗುವುದಂತ ಹೇಳಿದರು. ಮುಂದೆ ನನ್ನ ಮಗನನ್ನು ಕೆಲವು ಪೋಲೀಸರು ಇಬ್ರಾಹಿಂ ರೋಜಕೆ ಕರಕೊಂಡುಹೋಗಿ ತಮ್ಮ ಮನಸ್ಸಿಗೆ ಬಂದಂತೆ ಹೊಡೆದರು. ಬಡಿಯುವುದರಲ್ಲಿ ನನ್ನ ಮಗನ ಜೀವಹೋಯಿತು ಮುಂದೆ ಸರಕಾರಿ ದವಾಖಾನೆಯಲ್ಲಿ ಹಾಕಿದರು. ಪೋಲೀಸರೆಲ್ಲ ಕೂಡಿ ನನ್ನ ಮಗನ ಜೀವ ತಗೊಂಡಿರುತ್ತಾರೆ" ಎಂದು ತಿಳಿಸಿರುವನು.

7-3-58ನೇ ದಿನಸದ ಜಾತೀಯ ಕಲಹದ ಸಂಬಂಧ ನೇಮಿಸಲ್ಪಟ್ಟ ಶಾಂತಿ ಸಮಿತಿಯವರು, ಊರಲ್ಲಿ ಕೆಲವರು ಅಪಪ್ರಚಾರ ಮಾಡುತ್ತಿರುವುದರಿಂದ ವಾತಾವರಣ ಕಲುಷಿತವಾಗ ಹತ್ತಿರುವುದರಿಂದ, ಸಾರ್ವಜನಿಕ ಸಭೆಮಾಡಿ ಜನರಲ್ಲಿ ಧೈರ್ಯ ತುಂಬಬೇಕೆಂಬ ಉದ್ದೇಶದಿಂದ, ತಾ. 9-3-58 ನೇ ದಿವಸ ರೇಡಿಯೋ ಮೈದಾನಿನಲ್ಲಿ ಶಾಂತಿ ಸಮಿತಿಯು ಪರವಾಗಿ, ಸಾರ್ವಜನಿಕ ಸಭೆಯನ್ನಿತ್ತಿದ್ದರು. ಈ ಸಭೆಯನ್ನು ಮುಗಿಸಿ ರಾತ್ರಿ 8-30ಕ್ಕೆ ನಾನು ಶ್ರೀ ದುಬೆ, ಮೊದಲಾದವರೆಲ್ಲ ಡಿ. ಎಸ್. ಪಿ. ಯವರನ್ನು ಕಾಣಲು ಪೋಲೀಸ್ ಕಚೇರಿಗೆ ಹೋಗುತ್ತಿದ್ದಾಗ, ಗಾಂಧಿ ಚೌಕಿನಲ್ಲಿ ಹಣಮಂತ ಮಾದಪ್ಪಾ ಮತ್ತು ಅವನ ಹೆಂಡತಿ, ನಮ್ಮಿಬ್ಬರ ಕಾಲುಬಿದ್ದು, ಪೋಲೀಸರು ತಮ್ಮ ಮಗನನ್ನು ಖೂನಿ ಮಾಡಿದರೆಂದು ಅಳ ಹತ್ತಿದರು. ನಾವೆಲ್ಲ ಗಡಿಬಿಡಿಯಲ್ಲಿದ್ದುದರಿಂದ, ಮರುದಿವಸ ವಿಚಾರ ಮಾಡಲಾಗುವುದೆಂದು ಹೇಳಿದೆವು.

ಸಾಧಾರಣ 25 ವಯಸ್ಸಿನ ಯಲ್ಲಪ್ಪನನ್ನು ಕಳವು ಮಾಡಿರುವನೆಂಬ ಆರೋಪದ ಮೇಲೆ ಪೋಲೀಸರು ಹಿಡಿದಿದ್ದು, 9-3-58 ನೇ ದಿವಸ ಇಬ್ರಾಹಿಂ ರೋಜಕ್ಕೆ ಕರೆದುಕೊಂಡು ಹೋದನಂತರ, ಪೋಲೀಸರ ಬಡಿತದಿಂದಾಗಿ ಇವನು ಸತ್ತನೆಂದು ಜನರು ಹೇಳುತ್ತಿರುವರು. ಸರಕಾರಿ ದವಾಖಾನೆಯಲ್ಲಿ ಯಲ್ಲಪ್ಪನ ಶವದ ಪೋಸ್ಟ್ ಮಾರ್ಟಂ ಆಗಿ, ಸಿಟಿ ಮ್ಯಾಜಿಸ್ಟ್ರೇಟರೂ ಸಮಕ್ಷಮ ಇದರ ವಿಚಾರಣೆ ನಡೆಸಿರುವರೆಂದೂ ತಿಳಿದು ಬರುತ್ತದೆ. ಯಲ್ಲಪ್ಪನ ಮರಣದ ಮೂಲ ಕಾರಣವನ್ನು ಕಂಡುಹಿಡಿಯಲು ಯೋಗ್ಯ ವಿಚಾರಣೆ ಯಾಗಬೇಕೆಂದು ಸಾರ್ವಜನಿಕರೂ, ಕಮ್ಯೂನಿಸ್ಟ್ ಪಾರ್ಟಿಯೂ ಸರಕಾರವನ್ನು ಕೇಳಿಕೊಳ್ಳುತ್ತದೆ. ಎಸ್. ಕೆ.

ಕಾಂಗ್ರೆಸ್ ರಾಜ್ಯ ಪೋಲೀಸ್ ರಾಜ್ಯವಾಯಿತೆ!

ಶಿವಮೊಗ್ಗಾಕ್ಕೆ ರಾಜ್ಯಪಾಲರು ಆಗಮಿಸುವ ದಿವಸ, ಶಿವಮೊಗ್ಗಾ ಜಿಲ್ಲಾ ಕಮ್ಯೂನಿಸ್ಟ್‌ಪಾರ್ಟಿ ಮುಂದಾಳುಗಳಾದ B.N.A. ಹೆಗ್ಡೆಯವರನ್ನು ಪೋಲೀಸ್ ಠಾಣೆಗೆ ಕರೆದೊಯ್ದ ಬಗ್ಗೆ ಸರಕಾರದ ನೀತಿಯನ್ನು ಖಂಡಿಸಿ ಶಿವಮೊಗ್ಗ ತಾಲ್ಲೂಕು ಕಮ್ಯೂನಿಸ್ಟ್ ಪಾರ್ಟಿ ಕಾರ್ಯದರ್ಶಿಗಳು ಈರೀತಿ ಹೇಳಿಕೆ ಕೊಟ್ಟಿರುತ್ತಾರೆ:

ಸೋಷಲಿಸ್ಟ್ ಪಾರ್ಟಿಗೂ ಕಮ್ಯೂನಿಸ್ಟ್ ಪಾರ್ಟಿಗೂ ಭಿನ್ನಾಭಿಪ್ರಾಯವಿರುವ ವಿಷಯ ತಿಳಿದೂ, ಕಮ್ಯೂನಿಸ್ಟ್ ಪಾರ್ಟಿ ಪಕ್ಷದಿಂದ ರಾಜ್ಯಪಾಲರ ಮುಂದೆ ಪ್ರದರ್ಶನ ಮಾಡುತ್ತೇವೆಂಬ ಸೂಚನೆಯೂ ಕೂಡ ಇಲ್ಲದಿದ್ದಾಗ್ಯೂ ಶಿವಮೊಗ್ಗಾಕ್ಕೆ ರಾಜ್ಯಪಾಲರು ಬರುವ ದಿವಸ ಬೆಳಿಗ್ಗೆ 10ಗಂಟೆಗೆ, ಶಿವಮೊಗ್ಗಾ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿ ಮುಂದಾಳುಗಳಾದ ವಕೀಲ್ B.N.A. ಹೆಗ್ಡೆಯವರ ರೂಮಿಗೆ ಬಂದು ಪೋಲೀಸರು, ನಿಮ್ಮನ್ನು ದಸ್ತಗಿರಿ ಮಾಡಿದ್ದೇವೆ, ಠಾಣೆಗೆ ಬರಬೇಕು ಎಂದು ಒತ್ತಾಯಪಡಿಸಿದರು. 'ಯಾವ ಕಾರಣದಿಂದ ದಸ್ತಗಿರಿ ಮಾಡುತ್ತೀರಿ. ಬರುವುದಕ್ಕಾಗುವುದಿಲ್ಲ' ಎಂದು ತಿಳಿಸಿದ ಮೇಲೆ, ವಿನಯ ಪೂರ್ವಕವಾಗಿ ಕರೆದೊಯ್ದು ಠಾಣೆಯಲ್ಲಿ ಹಲವಾರು ಪ್ರಶ್ನೆಗಳನ್ನು ಕೇಳಿ ಬಿಡುಗಡೆ ಮಾಡಿದರು. ಈ ರೀತಿಯ ಪೋಲೀಸರ ವರ್ತನೆಯನ್ನು ಮತ್ತು ಸರಕಾರದ ನೀತಿಯನ್ನು ಖಂಡಿಸುತ್ತೇವೆ. ಕಾಂಗ್ರೆಸ್ ರಾಜ್ಯದಲ್ಲಿ ವಿರೋಧ ಪಕ್ಷಗಳೇ ಇರಬಾರದೆಂಬ ನೀತಿಯನ್ನು ಅನುಸರಿಸಿದಂತೆ ಕಾಣುತ್ತದೆ. ಯಾವ ಕಾರಣವೂ ಇಲ್ಲದೆ, ವಿರೋಧ ಪಕ್ಷದ ಸದಸ್ಯರನ್ನು ವಿನಾಕಾರಣ ಪೋಲೀಸ್ ಠಾಣೆಗೆ ಕರೆದೊಯ್ದು ವಿಚಾರ ಮಾಡುವುದು ಪ್ರಜಾ ಪ್ರಭುತ್ವದಲ್ಲಿ ಸರಿಯಾದ ಮಾರ್ಗವಲ್ಲ. ಕಾಂಗ್ರೆಸ್ ರಾಜ್ಯ ನಿರಂಕುಶ ಪ್ರಭುತ್ವದ ದಾರಿ ಹಿಡಿದಿದೆಯೋ ಎಂದೆನಿಸುತ್ತಿದೆ. ಇನ್ನು ಮುಂದೆ ಈ ರೀತಿ ವಿನಾಕಾರಣ ವಿರೋಧ ಪಕ್ಷದ ಸದಸ್ಯರುಗಳನ್ನು ಪೋಲೀಸ್ ಠಾಣೆಗೆ ಕರೆದೊಯ್ಯುವುದು ಸರಿಯಲ್ಲ.

ಈ ರೀತಿ ಮುಂದೆ ಆಗದಂತೆ ನೋಡಿಕೊಳ್ಳಬೇಕೆಂದು ಶಿವಮೊಗ್ಗಾ ಕಮ್ಯೂನಿಸ್ಟ್ ಪಾರ್ಟಿಯು ಸರ್ಕಾರವನ್ನು ಎಚ್ಚರಿಸ ಬಯಸುತ್ತದೆ.

ಪ್ರಾಂತೀಯ ಸುದ್ದಿ ಸಂಗ್ರಹ

ಸೋಮವಾರಪೇಟೆ ತಾಲ್ಲೂಕಿನ ಕೆಲವು ನೌಕರರ ಹೊಣೆಗೇಡಿ ವರ್ತನೆ

ನಮ್ಮ ರಾಜ್ಯದ ತಾಲ್ಲೂಕಿನ ಗ್ರಾಮಾಂತರಗಳ ಹೆಂಗಸು, ಮಕ್ಕಳ ಆರೋಗ್ಯದ ಬಗ್ಗೆ ಕಾಯಿಲೆಯುವರ ಮತ್ತು ಗರ್ಭಿಣಿಯರ ಬಗ್ಗೆ ಸಲಹೆ ಸಹಕಾರ ಕೊಟ್ಟು ಆಸ್ಪತ್ರೆಗೆ ಹೋಗುವಂತೆ ಮಾಡಿ ತನ್ಮೂಲಕ ಗ್ರಾಮೀಣ ಜನತೆಯ ಆರೋಗ್ಯ ಸುಧಾರಣೆ ಮೂಲಕ ರಾಜ್ಯದ ಅಭ್ಯುದಯದ ಒಂದೊಂಗವನ್ನು ಸಾಧಿಸುವ ಪವಿತ್ರ ದೃಷ್ಟಿಯಿಂದ ಸರಕಾರವು ಪ್ರತಿ ತಾಲೋಕಿನಲ್ಲಿಯೂ ಭಾರಿ ಸಂಬಳದ ಹೆಲ್ತ್ ನರ್ಸುಗಳನ್ನೂ, ಇವರ ಬಾಡಿಗಾರ್ಡ್ ಮತ್ತು ಇತರ ಕೆಲಸಗಳಿಗಾಗಿ 75 ರೂ. ಸಂಬಳದ ಜವಾನನನ್ನು ಸಹ ನೇಮಿಸಿದೆ. ಮತ್ತು ಪ್ರತಿ ಆಸ್ಪತ್ರೆಗಳಲ್ಲಿ, ಡಾಕ್ಟರುಗಳು, ಲೇಡಿ ಡಾಕ್ಟರುಗಳು, ಇತರ ಸಿಬ್ಬಂದಿ ಎಲ್ಲವೂ ಇದೆ. ಆದರೆ ಸರಕಾರದ ಇಂತಹ ಘನೋದ್ದೇಶವು ಕಾರ್ಯಗತವಾಗದಿರಲು ಬೇಜವಾಬ್ದಾರಿಯುಳ್ಳ ನೌಕರರ ಕರ್ತವ್ಯ ಚ್ಯುತಿ, ಸರ್ವಾಧಿಕಾರಿತನ ಮತ್ತು ಹೊಣೆಗಾರ ಅಧಿಕಾರಿಗಳ ಬೇಜವಾಬ್ದಾರಿತನ ಮತ್ತು ಉದಾಸೀನತೆಗಳೇ ಕಾರಣವೆಂದು ನಾವು ತಿಳಿಯಬೇಕಾಗಿದೆ. ಇತ್ತೀಚೆಗೆ ಇಂತಹ ನೌಕರರ ಸಂಖ್ಯೆ ಏರುತ್ತಿದೆ.

ನಮ್ಮ ತಾಲೋಕಿನ ಹೆಲ್ತ್ ನರ್ಸ್‌ರವರು ಒಂದು ಪಟ್ಟಣದಿಂದ ಮತ್ತೊಂದು ಪಟ್ಟಣಕ್ಕೆ ಬಸ್ಸಿನಲ್ಲಿ ಹೋಗುವುದು ಮತ್ತು ಅಲ್ಲಿನ ಆಸ್ಪತ್ರೆಗೆ ಹೋಗಿ ಬರುವುದು ಮತ್ತು ತನ್ನ ಕಾರ್ಯಕ್ಷೇತ್ರವಲ್ಲದ ವೀರಾಜಪೇಟೆಗೆ ಆಗಾಗ್ಗೆ ಹೋಗಿ ಬರುವುದು ಮಾತ್ರ ಕಾಣುತ್ತೆ. ಹಲವಾರು ಹಳ್ಳಿಗಳಿಗೆ ಈ ನರ್ಸುರವರು ಈವರೆವಿಗೂ ಹೋಗಿರುವುದಿಲ್ಲ. ಈ ಒಬ್ಬ ಹೆಲ್ತ್ ನರ್ಸು ಮತ್ತು ಈಕೆಗೆ ಒಬ್ಬ ಜವಾನ ಮತ್ತು ಇವರ ತಿರುಗಾಟದ ಬೇಟ, ಸಂಬಳ ಒಟ್ಟಾರೆ ವರ್ಷಕ್ಕೆ ಇವರಿಬ್ಬರಿಂದ 4 ರಿಂದ 5 ಸಾವಿರ ರೂಪಾಯಿ ಭಾರಿ ಮೊಬಲಗು ಅನ್ಯಾಯವಾಗಿ ಖರ್ಚಾಗುತ್ತಿದೆ. ಮಾತ್ರವಲ್ಲದೆ ಸೋಮವಾರ ಪೇಟೆಯ ಆಸ್ಪತ್ರೆಯ ವಿಚಾರದಲ್ಲಿ ಕೆಲವೊಂದು ಡಾಕ್ಟರುಗಳ ಮತ್ತು ಲೇಡಿ ಡಾಕ್ಟರು ಇತರ ಕೆಲವು ನೌಕರರ ಕರ್ತವ್ಯ ಲೋಪದೋಶ ಮತ್ತು ಸರ್ವಾಧಿಕಾರಿತನದಿಂದ ಅಧಿಕಾರ ಮದದಿಂದ ವರ್ತಿಸುವ ಬಗ್ಗೆ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತೆ. ಈ ಬಗ್ಗೆ ಮೇಲಾಧಿಕಾರಿಗಳ ಮೌನಾಚರಣೆಯಿಂದ ಇಲ್ಲಿನ ಕೆಲವು ಅಧಿಕಾರಿ ಮತ್ತು ನೌಕರರ ವರ್ತನೆಯು ದಿನೇ ದಿನೇ ಸಾಮ್ರಾಜ್ಯಶಾಹಿಗಳ ವರ್ತನೆಯನ್ನು ತಾಳಿದೆ.

ಕೆಲದಿನಗಳ ಹಿಂದೆ ಒಬ್ಬ ರೋಗಿಯನ್ನು ಇಲ್ಲಿನ ಆಸ್ಪತ್ರೆಗೆ ತಂದಾಗ "ಈ ಕಾಯಿಲೆ ಇಲ್ಲಿ ವಾಸಿ ಆಗುವುದಿಲ್ಲ" ಹೋಗೆಂದು ಕಳುಹಿಸಿದರು. ಆದರೆ ಅವನು ಇಲ್ಲಿನ ಒಂದು ಸ್ವಂತ ಡಾಕ್ಟರರ ಆಸ್ಪತ್ರೆಗೆ ಸೇರಿ ಈಗ ಗುಣಮುಖ ಹೊಂದುತ್ತಿದ್ದಾನೆ. ಹೀಗಾದ ಮೇಲೆ ಇಲ್ಲಿ ಆಸ್ಪತ್ರೆ ಏಕೆ? ಮಾತ್ರವಲ್ಲ ಇಲ್ಲಿನ ಲೇಡಿ ಡಾಕ್ಟರು ಮೇರಿ ಫೆರ್ನಾಂಡೀಸ್‌ರವರ ಸರ್ವಾಧಿಕಾರಿತನದ ವರ್ತನೆಯ ಬಗ್ಗೆ 2 ಬಾರಿ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. D.M.O. ರವರಿಗೂ ಬೇರೆ ರಿಪೋರ್ಟು ಮಾಡಿತ್ತು. ಆದರೆ ಈವರೆವಿಗೂ ಯಾವ ವಿಚಾರಣೆ ಯಾಗದೆ ಇದ್ದುದ್ದು ಈ ಅಮ್ಮನವರ ಸ್ವೇಚ್ಛಾಧಿಕಾರಕ್ಕೆ ಪುಟ ದೊರೆತಂತಾಗಿದೆ.

ತಾ. 5ರಲ್ಲಿ ಇದೇ ನಾಡಿನ ಬಿಲ್ಲವರ ಚಂದಪ್ಪನು, ಹಲ್ಲುನೋವು, ತಲೆನೋವು, ಜ್ವರ ಮುಂತಾದ ಕಾಯಿಲೆಯ ತನ್ನ ಹೆಂಡತಿಯನ್ನು ಆಸ್ಪತ್ರೆಗೆ ಕರೆತಂದು ಲೇಡಿ ಡಾಕ್ಟರಲ್ಲಿ ವಾರ್ಡಿನಲ್ಲಿ ಸೇರಿಸಿಕೊಳ್ಳಲು ಬಿನ್ನವಿಸಿಕೊಂಡಾಗ ಸಾಧ್ಯವಿಲ್ಲವೆಂದು ವಾಪಾಸು ಕಳುಹಿಸಿರುತ್ತಾರೆ. ಅಲ್ಲದೆ ಅವನ 2ವರ್ಷದ ಮಗುವಿಗೆ ಜ್ವರ ಬರುತ್ತಿತ್ತು ಔಷಧಿಬೇಕೆಂದಾಗ, ಈಗ ಜ್ವರವಿಲ್ಲ, ಜ್ವರ ಬಂದಾಗ ಕರಕೊಂಡು ಬಾ ಎಂದು ಕಳಿಸಿರುತ್ತಾರೆ. ಬಸ್ಸಿ ತಿರುಗಾಡದ 4 ಮೈಲು ದೂರದ ಹಳ್ಳಿಯಿಂದ ಪ್ರಯಾಸದಿಂದ ಕರೆದುಕೊಂಡು ಬಂದಿದ್ದ ತನ್ನ ಹೆಂಡತಿ ಮಕ್ಕಳನ್ನು ಪುನಃ ಕಷ್ಟದಿಂದ ತನ್ನ ಊರಿಗೆ ಕರೆದುಕೊಂಡು ಹೋಗುವಾಗ ಇದನ್ನೆಲ್ಲಾ ಕಂಡು, ಕೇಳಿದ ನಾನು, ಆಗಲೇ ಅಲ್ಲಿದ್ದ 2 ಆಸ್ಪತ್ರೆಯ ನೌಕರರಿಗೂ ಈ ವಿಚಾರ ತಿಳಿಸಿದೆನು. ಚಂದಪ್ಪನ ಹೆಂಡತಿ, ಮಗು, ಸತ್ತಿದ್ದಾರೋ ಬದುಕಿದ್ದಾರೋ ಆ ವಿಚಾರ ಬೇರೆ. ಇಂತಹ ನಿರ್ದಯದ ಸ್ವೇಚ್ಛಾಚಾರದ ಲೇಡಿ ಡಾಕ್ಟರರ ವಿಚಾರಣೆಯಾಗಲಿ. ಆಸ್ಪತ್ರೆಯು ಯಾರೊಬ್ಬನ ಸ್ವಂತ ಆಸ್ತಿಯಲ್ಲ; ಒಬ್ಬ ಡಾಕ್ಟರನ ಸೊತ್ತಲ್ಲ. ಇದು ಸಾರ್ವಜನಿಕರ ಸೊತ್ತು. ಇಲ್ಲಿನ ನೌಕರ ವರ್ಗದವರು ಸಾರ್ವಜನಿಕರ ಹಣದಿಂದ ದುಡಿಯುತ್ತಿರುವುದರಿಂದ ಇವರು ಸಾರ್ವಜನಿಕರ ಸೇವಕರು ಎಂದು ಎಚ್ಚೆತ್ತ ಜನತೆ ತಿಳಿದಿದೆ. ಆದುದರಿಂದ ಕರ್ತವ್ಯ ಚ್ಯುತಿಗೈದ, ಬೇಜವಾಬ್ದಾರಿ - ಸರ್ವಾಧಿಕಾರಿತನದ ಮನೋಭಾವನೆಯ ಅಧಿಕಾರಿಗಳ ವಿಚಾರಣೆಯಾಗಲಿ. ಆರೋಗ್ಯರನ್ನು ಹೊರತಳ್ಳಿ, ಸೇವಾ ಮನೋಭಾವನೆಯ ಹುರುಪಿನ ಜನರಿಗೆ ಉದ್ಯೋಗ ಕೊಡಲು ಅನುವುಮಾಡಿರಿ.

ಕರ್ನಾಟಕಕ್ಕೆ ಪ್ರತ್ಯೇಕ ಅಂಚೆ ಮತ್ತು ತಂತಿ ಸರ್ಕಲ್ ಕೂಡಲೇ ರಚನೆಯಾಗಲಿ

ಹೋದ ವಾರ ಮೈಸೂರು ಶಾಸನ ಸಭೆಯಲ್ಲಿ ಶ್ರೀ ದೀನದಯಾಳು ನಾಯ್ಡುರವರ ಪ್ರಶ್ನೆಗೆ ಮಂತ್ರಿಗಳು ಉತ್ತರ ಕೊಡುತ್ತಾ ನಮ್ಮ ರಾಜ್ಯಕ್ಕೊಂದು ಪ್ರತ್ಯೇಕ ಪಿ. ಅಂಡ್ ಟಿ. ಸರ್ಕಲ್ ರಚನೆಗೆ ಕೇಂದ್ರ ಸರಕಾರ ಸಮ್ಮತಿ ಕೊಟ್ಟಿಲ್ಲವೆಂದು ತಿಳಿಸಿರುತ್ತಾರೆ. ಇದರ ಬಗ್ಗೆ ಸರಕಾರ ಏನು ಕ್ರಮ ಕೈಗೊಂಡಿದೆಂದು ಅವರು ತಿಳಿಸಲಿಲ್ಲ.

ಇದೇ ವಿಷಯದ ಬಗ್ಗೆ ಲೋಕಸಭೆಯಲ್ಲಿ ಪ್ರಶ್ನೆ ಬಂದಾಗ ಪಂತ್‌ರವರು "ಪಿ. ಅಂಡ್ ಟಿ. ಸರ್ಕಲನ್ನು ಆಡಳಿತೆಯ ಅನುಕೂಲತೆಯ ದೃಷ್ಟಿಯಿಂದ ರಚಿಸುವುದಲ್ಲದೆ ಭಾಷಾವಾರು ಆಧಾರದ ಮೇಲಲ್ಲ" ವೆಂದು ತಿಳಿಸಿ ಈ ಬೇಡಿಕೆಯ ವಿಷಯದಲ್ಲಿ ತಪ್ಪು ಕಲ್ಪನೆ ಬರುವಂತೆ ಹೇಳಿದ್ದಾರೆ.

ಪ್ರಾಂತಗಳ ಪುನರ್ರಚನೆಯು ಮುಖ್ಯವಾಗಿ ಭಾಷಾವಾರಾಗಿಯೇ ಆಗಿದೆಂಬುದು ವಾಸ್ತವಾಂಶವಾಗಿದೆ. ಈ ತತ್ವವನ್ನು ಕೇಂದ್ರ ಸರಕಾರ ನಿರಾಕರಿಸಿದ್ದರೂ ಕಾರ್ಯತಃ ಇದನ್ನು ಆಧಾರವಾಗಿಟ್ಟುಕೊಂಡು ಹೊಸ ಪ್ರಾಂತಗಳ ರಚನೆಯಾಗಿರುವುದು ಎಲ್ಲರಿಗೂ ತಿಳಿದ ವಿಷಯವೆ. ನೂತನ ಮೈಸೂರು ರಾಜ್ಯಕ್ಕೊಂದು ಪ್ರತ್ಯೇಕ ಸರ್ಕಲ್ ರಚನೆಯಾಗಬೇಕೆಂಬ ಬೇಡಿಕೆಯು ನ್ಯಾಯವಾಗಿರುವುದಲ್ಲದೆ ಆಡಳಿತೆಯದೃಷ್ಟಿ ಬಹಳ ಅವಶ್ಯವೆಂಬುದನ್ನು ಒತ್ತಿ ಹೇಳ ಬೇಕಾಗಿಲ್ಲ. ಅಂಚೆ ಇಲಾಖೆಯ ನೌಕರರ ಸಂಘವು ಹೊರಡಿಸಿದ ಪ್ರಕಟನೆಯಲ್ಲಿ ಇದರ ಬಗ್ಗೆ ಅನೇಕ ಕಾರಣಗಳನ್ನು ತಿಳಿಸಿರುತ್ತದೆ.

1. ಅಂಚೆ ಮತ್ತು ತಂತಿ ಇಲಾಖೆಗೆ ಆಯಾ ರಾಜ್ಯದ ಆಡಳಿತೆಗಳ ನೇರ ಸಂಬಂಧವಿರುತ್ತದೆ. ಅನೇಕ ವಿಷಯಗಳಲ್ಲಿ ಅವು ಹೊಂದಿಕೊಂಡು ಹೋಗಬೇಕಾಗುತ್ತದೆ. ಇದನ್ನು ಗಮನಿಸಿ ಅಸ್ಸಾಂ, ಬಿಹಾರ್, ಒರಿಸ್ಸಾ, ಆಂಧ್ರ, ಹೈದರಾಬಾದ್ ಮುಂತಾದ ರಾಜ್ಯಗಳಲ್ಲಿ ಪ್ರತ್ಯೇಕ ಸರ್ಕಲ್‌ಗಳನ್ನು ರಚಿಸಲಾಗಿದೆ.

2. ಬೇರೆ ಬೇರೆ ಸರ್ಕಲ್‌ಗಳಲ್ಲಿ ನಮ್ಮ ರಾಜ್ಯದ ವಿವಿಧ ಭಾಗಗಳಿರುವುದರಿಂದ ಅವುಗಳ ಅಭಿವೃದ್ಧಿಯನ್ನು ಕಡೆಗಣಿಸಲಾಗುತ್ತಿದೆ. ಹೊಸ ಅಂಚೆ ಆಫೀಸುಗಳನ್ನು ತೆರೆಯುವುದು, ಜಿಲ್ಲೆಗೊಂದರಂತೆ ಇಲಾಖೆಯ ಹೊಸ ಜಿಲ್ಲೆಗಳನ್ನು ರಚಿಸುವುದು, ಹೆಚ್ಚು ಅಂಚೆ ತಂತಿ ಸೌಕರ್ಯಗಳನ್ನೊದಗಿಸುವುದು, ಹೊಸ ಕಟ್ಟಡಗಳನ್ನು ಕಟ್ಟುವುದು ಮುಂತಾದುವುಗಳಿಗೆ ಪ್ರತ್ಯೇಕ ಸರ್ಕಲ್ ಆದರೆ ಮಾತ್ರ ಗಮನ ಸೆಳೆಯಲು ಸಾಧ್ಯವಿದೆ.

2,000 ಜನ ಸಂಖ್ಯೆಗೊಂದು ಅಂಚೆ ಕಚೇರಿ ಬೇಕೆಂದಿದ್ದರೂ ಈಗ ಪರಿಸ್ಥಿತಿ ಬೇರೆಯಾಗಿದೆ. ದ. ಕ. ಜಿಲ್ಲೆಯಲ್ಲಿ 3032 ಜನರಿಗೊಂದು, ಕೊಡಗಿನಲ್ಲಿ 4779 ಕ್ಕೊಂದು, ಬೆಳಗಾಂವಿಯಲ್ಲಿ 5328 ಕ್ಕೊಂದು, ದಾರವಾಡದಲ್ಲಿ 8163ಕ್ಕೊಂದು, ತುಮಕೂರಿನಲ್ಲಿ 9211 ಕ್ಕೊಂದು ಬೆಂಗಳೂರಲ್ಲಿ 12,737 ಜನಕ್ಕೊಂದರಂತೆ ಪೋಸ್ಟ್ ಆಫೀಸ್ ಇರುತ್ತದೆ.

ತಮಿಳು ನಾಡಿನಲ್ಲಿ ರೆವೆನ್ಯೂ ಜಿಲ್ಲೆಗೊಂದು ಪೋಸ್ಟಲ್ ಡಿವಿಜನ್ ಇದ್ದರೆ ನಮ್ಮಲ್ಲಿ ಒಟ್ಟು ಎಂಟೇ ಡಿವಿಜನ್‌ಗಳಿರುವುದು ಶೋಚನೀಯವಾಗಿದೆ.

ಡೆಲಿವರಿ ಆಫೀಸುಗಳೂ ತೀರಾ ಕಡಿಮೆ. ಬೆಂಗಳೂರಿನ ಜನಸಂಖ್ಯೆ 1941 ರಲ್ಲಿ 4½ ಲಕ್ಷವಿದ್ದದ್ದು ಈಗ 1957 ರಲ್ಲಿ 12 ಲಕ್ಷಕ್ಕೇರಿದೆ, ಆದರೆ ಡೆಲಿವರಿ ಆಫೀಸುಗಳ ಸಂಖ್ಯೆ 1941 ರಲ್ಲಿ 7 ಇದ್ದದ್ದು ಈಗ 9 ಮಾತ್ರ ಆಗಿದೆ. ತಿರುಚಿಯಲ್ಲಿ 4½ ಲಕ್ಷಕ್ಕೆ 8 ಆಫೀಸುಗಳಿವೆ ಮತ್ತು ತ್ರಿವೇಂದ್ರಂನಲ್ಲಿ 2½ ಲಕ್ಷಕ್ಕೆ 8 ಆಫೀಸಿವೆ. ನಮ್ಮಲ್ಲೂ ಹೆಚ್ಚು ಡೆಲಿವರಿ ಆಫೀಸುಗಳಿದ್ದರೆ ಟಪಾಲು ಜನರಿಗೆ ಬೇಗ ಸಿಗಲು ಸಾಧ್ಯ.

ಪೋಸ್ಟ್ ಆಫೀಸು ಕಟ್ಟಡಗಳ ಪರಿಸ್ಥಿತಿ ಹೇಳಲಸಾಧ್ಯವಾಗಿದೆ. ಬೆಂಗಳೂರು ಸಿಟಿ ಪೋಸ್ಟ್ ಆಫೀಸು ದನಗಳ ಹಟ್ಟಿಯಂತಿದೆ. ಒಂದು ಸಣ್ಣ ಕಟ್ಟಡದಲ್ಲಿ 250 ಜನ ಕೆಲಸ ಮಾಡಬೇಕಾಗಿದೆ.

ನಮ್ಮ ರಾಜ್ಯದ ನಾನಾ ಭಾಗಗಳೀಗ ಬೆಂಗಳೂರು, ಕೊಯಂಬತ್ತೂರು, ಪೂನಾ ಮತ್ತು ಹೈದರಾಬಾದು ಡಿಸ್ಟ್ರಿಕ್ಟ್ ಟೆಲಿಗ್ರಾಫ್ ಇಂಜನಿಯರುಗಳ ಕೆಳಗಿವೆ. ಇವರೊಳಗೆ ಪರಸ್ಪರ ಸಂಬಂಧವೇ ಇಲ್ಲದಾಗಿ ಅಭಿವೃದ್ಧಿಗೆ ಅಡ್ಡಿಯಾಗಿದೆ. ತೀರ್ಥಹಳ್ಳಿಯಿಂದ ಉಡುಪಿಗೆ 40 ಮೈಲು ಮಾತ್ರ ದೂರವಿದ್ದರೂ ತೀರ್ಥಹಳ್ಳಿಯಿಂದ ಕೊಟ್ಟ ಟೆಲಿಗ್ರಾಂ ಶಿವಮೊಗ್ಗ, ಬೆಂಗಳೂರು, ಕೊಯಂಬತ್ತೂರು, ಮಂಗಳೂರಿಗಾಗಿ ಉಡುಪಿಗೆ ಹೋಗಬೇಕಾಗಿದೆ. ಪುತ್ತೂರಿನಿಂದ 50 ಮೈಲಿ ದೂರದ ಮಡಿಕೇರಿಗೆ ಹೋಗುವ ತಂತಿಯು ಮಂಗಳೂರು, ಕಲ್ಲಿಕೋಟೆ, ಕೊಯಂಬತ್ತೂರು, ಮೈಸೂರುಗಳಿಗಾಗಿ ಮಡಿಕೇರಿಕೆಗೆ ಹೋಗುತ್ತದೆ. ಇದೊಂದು ಅಪಹಾಸ್ಯಕರವಾಗಿದೆ. ಪ್ರತ್ಯೇಕ ಸರ್ಕಲ್ ಇದ್ದಿದ್ದರೆ ಈ ಊರುಗಳಿಗೆ ನೇರವಾಗಿ ಜೋಡಿಸಲು ಸಾಧ್ಯ.

3. ಕೇಂದ್ರ ಸರಕಾರಕ್ಕೆ ಹಣದ ಅಡಚಣೆ ಇರುವುದು ನಿಜ. ಆದರೆ ಹೊಸ ಆಂಧ್ರ ರಾಜ್ಯದಲ್ಲಿರುವ ಎರಡು ಸರ್ಕಲ್‌ಗಳನ್ನು ಒಂದು ಗೂಡಿಸಿ ಕರ್ನಾಟಕಕ್ಕೊಂದು ಸರ್ಕಲ್ ಮಾಡಿದರೆ ಸರಕಾರಕ್ಕೆ ಯಾವ ಆರ್ಥಿಕ ಹೊರೆಯೂ ಬೀಳುವುದಿಲ್ಲ.

4. ರಾಜ್ಯದ ವಿಸ್ತೀರ್ಣ ಮತ್ತು ಜನಸಂಖ್ಯೆಗಳನ್ನು ಗಮನಿಸಿದರೂ ಬೇರೆನೇ ಸರ್ಕಲ್ ಅಗತ್ಯ. ನಮಗಿಂತ ಕಡಿಮೆ ಜನಸಂಖ್ಯೆ ಮತ್ತು ವಿಸ್ತೀರ್ಣ ಇರುವವರಿಗೂ ಪ್ರತ್ಯೇಕ ಸರ್ಕಲ್‌ಗಳಿವೆ.

ಇಲಾಖೆಯ ನೌಕರರ ದೃಷ್ಟಿಯಿಂದಲೂ ಇದು ಬಹಳ ಅಗತ್ಯವಿರುತ್ತದೆ. ಅವರ ಕೆಲಸದ ಹೊರೆಯನ್ನು ಹೆಚ್ಚಿಸಲಾಗಿದೆ.

ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಎನ್. ಎಲ್. ಉಪಾಧ್ಯಾಯರು ಈ ಬೇಡಿಕೆಯನ್ನು ಸಮರ್ಥಿಸಿ ಹೇಳಿಕೆಯನ್ನಿತ್ತಿದ್ದಾರೆ. ಪ್ರತ್ಯೇಕ ಸರ್ಕಲ್ ರಚನೆಯು ಕೂಡಲೇ ಆಗಬೇಕೆಂದೂ ಸಾರ್ವಜನಿಕರ, ಇಲಾಖೆಯ ನೌಕರರ ಮತ್ತು ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಕೇಂದ್ರ ಸರಕಾರವು ಕೂಡಲೇ ಇದನ್ನು ಒಪ್ಪುವಂತೆ ಮಾಡಲು ರಾಜ್ಯ ಸರಕಾರವೂ, ಶಾಸನ ಸಭಾ ಮತ್ತು ಲೋಕ ಸಭಾಸದಸ್ಯರೂ ಮತ್ತು ಸಾರ್ವಜನಿಕ ಸಂಸ್ಥೆಗಳೂ ಒತ್ತಾಯ ತರಬೇಕೆಂದು ವಿನಂತಿಸಿದ್ದಾರೆ. ಇದು ಬೇಗನೇ ಈಡೇರಲೆಂದು ನಾವು ಹಾರೈಸುತ್ತೇವೆ.

—೦—

ಪ್ರಪಂಚದಲ್ಲಿ ಮೊದಲನೆಯ "ಸ್ಟಿರಿಯೋ ಬೀಟಾಟ್ರನ್" ಯಂತ್ರ!

ತೋಮ್‌ಸ್ಕ್ ವಿವಿಧ ಕಲಾವಿದ್ಯಾಲಯದಲ್ಲಿ ಪ್ರಪಂಚದಲ್ಲೇ ಮೊದಲನೆಯದಾದ 'ಸ್ಟೀರಿಯೋ ಬೀಟಾಟ್ರನ್' ಯಂತ್ರವನ್ನು ಚಲಾವಣೆಗೆ ತರಲಾಗಿದೆ. ಅದು ಎರಡು ವಿದ್ಯುತ್ಕಣ–ವೇಗವರ್ಧಕಗಳ ಮತ್ತು ಉನ್ನತ ಶಕ್ತಿಯ ಕಣಗಳನ್ನು ಪಡೆಯುವ 'ಬೀಟಾಟ್ರನ್'ಗಳ ಯಂತ್ರ ಸಮುಚ್ಚಯವಾಗಿದೆ. ಅದರ ವಿದ್ಯುತ್ಕಾಂತ ವೇಗವರ್ಧಕ ಕುಹರಗಳು ಕಿರಣ ಪ್ರಸರಣದ ಎರಡು ಕಿರಣಾವಳಿಗಳಿಗಳನ್ನು ಶಿಲುಬೆಯಾಕಾರದಲ್ಲಿತಯಾರಿಸುತ್ತವೆ. ಇದರಿಂದ ವೇಗವರ್ಧಿತ ವಿದ್ಯುತ್ಕಣಗಳ ಆಗಮನದ ಅಂತರ್‌ಕ್ರಿಯೆಯನ್ನು ಪರಿಶೀಲಿಸಲು, ಕೈಗಾರಿಕೋದ್ಯಮದಲ್ಲಿ ಸರಕುಗಳ ಯೋಗ್ಯತೆಯನ್ನು ನಿಯಂತ್ರಿಸುವುದಕ್ಕಾಗಿ 'ಸ್ಟೀರಿಯೋ' ಛಾಯಾಚಿತ್ರಗಳನ್ನು ಪಡೆಯಲು ಮತ್ತು ಅತ್ಯಂತ ಕರಾರುವಾಕ್ಕಾಗಿ ದೋಷಗಳನ್ನು ಪತ್ತೆಹಚ್ಚಲು ಸಾಧ್ಯವಾಗುತ್ತದೆ ವಿದ್ಯುತ್ಕಣ ಕಿರಣಾವಳಿಯನ್ನು ವೇಗವರ್ಧಕ ಕುಹರದಿಂದಾಚೆಗೊಯ್ಯುವ ಸಮಸ್ಯೆಯನ್ನು ಯಂತ್ರನಿರ್ಮಾತೃಗಳು ಯಶಸ್ವಿಯಾಗಿ ಬಗೆಹರಿಸಿದ್ದಾರೆ. ಇದರಿಂದ, ವಿಸ್ತೃತ ಪ್ರಮಾಣದಲ್ಲಿ ಉನ್ನತ ಶಕ್ತಿಯ ವಿದ್ಯುತ್ಕಣಗಳನ್ನು ಬಳಸಲು,— ವಿಶೇಷತಃ ದೀರ್ಘವ್ರಣ ಚಿಕಿತ್ಸೆಗಾಗಿ ಔಷಧಿಯಾಗಿ ಬಳಸಲು—ಸಾಧ್ಯವಾಗಿದೆ.

—"ತಾಸ್"

ಓದುಗರ ಓಲೆ

ಸ್ವಾಮಿ,

1937 ನೇ ಇಸ್ವಿಯಿಂದ ಮೈಸೂರು ಕಾಂಗ್ರೆಸ್ ಪ್ರಥಮ ಅಧ್ಯಕ್ಷರಾದ ಶ್ರೀಮಾನ್ T. ಸಿದ್ದಲಿಂಗಯ್ಯ ತಗಡೂರು ರಾಮಚಂದ್ರರಾವ್, ವೀರಕೇಸರಿ ಸೀತರಾಮಶಾಸ್ತ್ರಿರೊಡನೆ 1937 ನೇ ಜೂನ್ 3 ರಂದು ಕೌನ್ಸಿಲ್ ಆ್ಯಕ್ಷನ್ ಸದಸ್ಯರಾಗಿ ಜೈಲಿಗೆ ಹೋದಲಾಗಾಯ್ತು ಈವರಿವಿಗೂ ಕಾಂಗ್ರೆಸ್ ಸಂಸ್ಥೆಯಲ್ಲಿ ಪ್ರಾಥಮಿಕ ಮಾಧ್ಯಮಿಕ ಸದಸ್ಯರಾಗಿದ್ದೂ, ಸಂಸ್ಥೆಯ ನಿಯಮಾವಳಿಗಳನ್ನು ಅನುಸರಿಸುತ್ತಿದ್ದೆ. ಅಂದು ಸಂಸ್ಥೆಯವರು ದೇಶದಲ್ಲಿ ಬಡ ಬೋರೇಗೌಡನ ರಕ್ತ ಹೀರುವ ಸರಕಾರವಿದೆಂದು ಹಳ್ಳಿ ಹಳ್ಳಿಗಳಲ್ಲಿ ಮೂಲೆ ಮೂಲೆಗಳಲ್ಲೂ ಸಾರಿದರು. ಇಂದು ಕಾಂಗ್ರೆಸ್ಸೇ ಅಧಿಕಾರಕ್ಕೆ ಬಂದ ಮೇಲೆ, ಪ್ರಜಾಸ್ವಾತಂತ್ರ್ಯ ದೊರೆತಮೇಲೆ, ಹಿಂದಿನ ಸರಕಾರಕ್ಕಿಂತಲೂ ಮಿಗಿಲಾಗಿ ಬಡ ಬೋರೆಗೌಡನನ್ನು ಸುಲಿದಿದೆ. ನಾಡಿನ ಅನ್ನಧಾತನಾದ ರೈತನನ್ನು ಬೀದಿಯ ಬಿಕಾರಿಯಾಗಿರಿಸಿದೆ. ಈ ದಿನದ ಅಸೆಂಬ್ಲಿಯಲ್ಲಿ ಜತ್ತಿ ಸಮಿತಿಯ ವರದಿಯನ್ನು ಪರಿಶೀಲಿಸಿದರೆ ದೇಶದ ಅನ್ನಧಾತನ ಅದೃಷ್ಟ ಪರೀಕ್ಷೆನಡೆಯುವಂತಿದೆ. ಕಾಂಗ್ರೆಸ್ಸೇ ಇದನ್ನು ವಿರೋಧಿಸುತ್ತದೆ. ಒಂಬತ್ತು ತಿಂಗಳು ಹೊತ್ತು ಹೆತ್ತು ಮೂರು ತಿಂಗಳು ಕಠಿನ ಅವಸ್ಥೆಯಲ್ಲಿ ಸಾಕಿ ಸಲಹಿದ ತಾಯಿ ನೆನಪೆಬಾರದ ಈ ಅಧಿಕಾರ ಸಂಸ್ಥೆ ವಚನ ಭ್ರಷ್ಟರಾಗಿರುವುದು ಹೆಚ್ಚಿನದೇನು ಅಲ್ಲ.

ಈಗ ದೇಶದಲ್ಲಿ ಅನ್ನಧಾತನಾದ ರೈತ ಮತ್ತು ಕಾರ್ಮಿಕರಿಗೆ ಆಗಿರತಕ್ಕ ತೊಂದರೆಯನ್ನು ಪರಿಶೀಲಿಸಿ ಈ ಸಂಸ್ಥೆಯ ಸದಸ್ಯಸ್ಥಾನಕ್ಕೆ ರಾಜೀನಾಮೆ ಇತ್ತು ಅಖಿಲ ಕರ್ನಾಟಕ ರೈತ ಸಂಘದ ಕಿಸಾನ್ ಶಾಖೆಯ ಬೆಂಗಳೂರು ಉತ್ತರ ತಾಲ್ಲೂಕಿನ ರೈತ ಸಂಘದ ಸದಸ್ಯನಾಗಿ ತಾ. 16 ಮತು 17-11-57ರಲ್ಲಿ ನಡೆದ ಅಖಿಲ ಕರ್ನಾಟಕ ಸೆಮಿನಾರ್‌ನಲ್ಲಿ ಪ್ರತಿನಿಧಿಯಾಗಿ, ಈಗ ಬೆಂಗಳೂರು ಉತ್ತರ ತಾಲ್ಲೂಕಿನ ರೈತ ಸಂಘದ ಸದಸ್ಯನಾಗಿರುತ್ತೇನೆ. ಆದ್ದರಿಂದ ಇನ್ನು ಮುಂದೆ ತಾಲ್ಲೂಕಿನ ರೈತ ಭಾಂದವರು, ತಮ್ಮ ಕಷ್ಟಗಳನ್ನು ಎದುರಿಸಲು ಸುಸಂಘಟಿತ ಒಕ್ಕೂಟದಲ್ಲಿ ಸೇರಲಿ. ಸರಕಾರಕ್ಕೆ ಪರಿಣಾಮಕಾರಿಯಾಗಿ ಮನವಿ ಮಾಡಿಕೊಳ್ಳಲು ಪ್ರತಿಯೊಬ್ಬ ರೈತ ಭಾಂಧವನೂ ಈ ರೈತ ಸಂಘಕ್ಕೆ ಸದಸ್ಯರಾಗಬೇಕಾಗಿ ಈಮೂಲಕ ವಿನಯಪೂರ್ವಕ ಅರಿಕೆ ಮಾಡಿಕೊಳ್ಳುತ್ತೇನೆ.

ಬಿ. ವಿ. ಹೆಚ್. ಗೌಡ
ವಿ. ಪಿ. ಛೇರ್ಮನ್. ಬ್ಯಾತ
ಬೆಂಗಳೂರು ಉತ್ತರ ತಾಲ್ಲೂಕು

'ನಮ್ಮ ರೈತರಿಗೆ ದ್ರೋಹವಾಗದ ಭೂ-ಸುಧಾರಣೆಯಾಗಲಿ'

ನೈಸೂರು ರಾಜ್ಯ ವಿಧಾನ ಸಭೆಯು ಭೂಸುಧಾರಣೆಗಳ ಬಗ್ಗೆ ಜತ್ತಿ ಸಮಿತಿಯು ಸರಕಾರಕ್ಕೆ ಒಪ್ಪಿಸಿರುವ ವರದಿಯನ್ನು ಚರ್ಚಿಸುತ್ತಿದೆ. ಅತಿಮುಖ್ಯವಾದ ಈ ಭೂಸುಧಾರಣೆಯ ವಿಷಯದಲ್ಲಿ ಈಗಾಗಲೇ ಅನೇಕರು ತಮ್ಮ ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಭಾರೀ ಬಿರುಗಾಳಿ ಎದ್ದಿದೆ. ಭೂಸುಧಾರಣೆಗಳೇ ಅಗತ್ಯವಿಲ್ಲವೆಂಬ ವಾದ ಮುಂದೂಡುತ್ತಲಿದ್ದಾರೆ. ವಿಧಾನ ಪರಿಷತ್ತಿನಲ್ಲಿ ಚರ್ಚೆ ಮುಕ್ತಾಯಗೊಂಡಿದೆ. ಸರಕಾರವು ಈ ಅಧಿವೇಶನದ ಅವಧಿಯಲ್ಲೇ ಸಮಗ್ರ ಶಾಸನವನ್ನು ಮಂಡಿಸಲಿದೆ.

ವಿಧಾನ ಸಭೆಯಲ್ಲಿ ಜತ್ತಿ ಸಮಿತಿಯ ವರದಿಯ ಕುರಿತು ಚರ್ಚೆ ಕಾಲದಲ್ಲಿ ಕಮ್ಯೂನಿಸ್ಟ್ ಸದಸ್ಯರಾದ ಶ್ರೀ ಎಂ. ಸಿ. ನರಸಿಂಹನ್‌ರವರು ಮಾರ್ಚ್ 15ರಂದು ಮಾಡಿದ ಭಾಷಣದ ಮುಖ್ಯಾಂಶಗಳನ್ನು ಇಲ್ಲಿ ಕೊಡಲಾಗಿದೆ. —ಸಂ.

ನಮ್ಮ ದೇಶದಲ್ಲಿ ಹೆಚ್ಚುಕಡಿಮೆ ಎಲ್ಲ ರಾಜಕೀಯ ಪಕ್ಷಗಳೂ ಭೂಸುಧಾರಣೆಗಳ ಅಗತ್ಯವನ್ನು ಒಪ್ಪಿವೆ. ಸ್ವಾತಂತ್ರ್ಯಕ್ಕೆ ಮುಂಚೆ ೩೦-೪೦ ವರ್ಷಗಳಿಂದ ಸ್ವಾತಂತ್ರ್ಯಾನಂತರ ೧೦ ವರ್ಷಗಳಿಂದ ಕಾಂಗ್ರೆಸ್ ಈ ವಿಚಾರ ಮಾತನಾಡುತ್ತಿದೆ.

ಆದರೆ ಕಾಂಗ್ರೆಸ್ ಪಕ್ಷದಲ್ಲಿ ಬೇಕಾದಷ್ಟು ಸಂದೇಹಿಗಳೂ ಉದ್ಭವಿಸಿದ್ದಾರೆ. ಭೂಮಾಲೀಕರಿಂದಲೇ ಅಲ್ಲದೆ ಕಾಂಗ್ರೆಸ್ ಪಕ್ಷದ ಕೆಲವರಿಂದ ಜತ್ತಿ ಸಮಿತಿಯ ವಿರುದ್ಧ ಚಳವಳಿ ಆರಂಭವಾಗಿ, ಕಾಂಗ್ರೆಸ್ಸಿನ ನಿಲುವು ಏನು ಎಂದು ತಿಳಿಯುವುದು ಕಷ್ಟವಾಗಿದೆ.

ಭೂಸುಧಾರಣೆಗಳನ್ನು ಜಾರಿಗೆ ತರುವುದರಲ್ಲಿ ರಾಜ್ಯ ಸರಕಾರಗಳು ಬಹಳ ನಿಧಾನವಾಗಿವೆ. ಶಾಸನ ಸಭೆಯ ಕಾಂಗ್ರೆಸ್ ಪಕ್ಷ ಭೂಮಾಲೀಕರ ಪ್ರಭಾವವನ್ನು ಎದುರಿಸುವುದರಲ್ಲಿ ಯಶಸ್ವಿಯಾಗಿಲ್ಲ."

ಭೂಸುಧಾರಣೆಗಳ ಬಗ್ಗೆ ಯೋಜನಾ ಕಮಿಷನ್ ಹಾಗೂ ಎ. ಐ. ಸಿ. ಸಿ. ತೀರ್ಮಾನಗಳಿಗೆ ಬಂದಿವೆ, ಆದರೂ ಏನೂ ಆಗಿಲ್ಲ.

ಭೂಸುಧಾರಣೆಗಳು ನಿಧಾನವಾಗಿ, ರೈತರಿಂದ ಜಮೀನು ಬಿಡಿಸುವುದು ಹೇರಳವಾಗಿ ನಡೆದಿದೆ.

ಭೂಸುಧಾರಣೆಗೆ ಕಾಂಗ್ರೆಸ್ ಪಕ್ಷದಲ್ಲೇ ಹೆಚ್ಚು ವಿರೋಧ

ಕಾಂಗ್ರೆಸ್ ಪಕ್ಷ ತೀವ್ರತೆಯಿಂದಿದ್ದಲ್ಲಿ ಸರ್ಕಾರ ನೇರವಾಗಿ ಮಸೂದೆಯನ್ನು ನಮ್ಮ ಮುಂದಿಡಬೇಕಾಗಿತ್ತು. ವರದಿಯಿಡುವ ಅಗತ್ಯವಿರಲಿಲ್ಲ. ಭೂಸುಧಾರಣೆಗಳಿಗೆ ವಿರೋಧ ಪಕ್ಷದವರಿಗಿಂತ ಕಾಂಗ್ರೆಸ್ ಪಕ್ಷದಲ್ಲೇ ಹೆಚ್ಚು ವಿರೋಧವಿದೆ.

ರಾಷ್ಟ್ರದ ಆರ್ಥಿಕ ಹಿತ, ಭೂಸುಧಾರಣೆಗಳ ಅನ್ವಯವನ್ನು ಒತ್ತಾಯ ಮಾಡುತ್ತಿದೆ. ಕೆಲವರು ಕಮ್ಯೂನಿಸಂ ತಡೆಯಲು ಸುಧಾರಣೆಗಳು ಬೇಕೆಂದೂ, ಮತ್ತೆ ಕೆಲವರು ಸುಧಾರಣೆಗಳು ಬಂದರೆ ಕಮ್ಯೂನಿಸಂ ಬರುವುದೆಂದೂ ಹೇಳುತ್ತಿರುವರು. ಇವರಿಬ್ಬರೂ ಅನಿಶ್ಚಿತ ಪರಿಸ್ಥಿತಿಯಲ್ಲಿದ್ದಾರೆ.

— ವಿಧಾನ ಸಭೆಯಲ್ಲಿ ಎಂ.ಸಿ. ನರಸಿಂಹನ್‌ರ ಭಾಷಣ —

ಕಮ್ಯೂನಿಸ್ಟ್ ರಾಷ್ಟ್ರವಾಗಲಿ, ಸೋಷಲಿಸ್ಟ್ ರಾಷ್ಟ್ರವಾಗಲಿ, ಬಂಡವಾಳಶಾಹಿ ರಾಷ್ಟ್ರವಾಗಲಿ ಭೂಸುಧಾರಣೆಗಳನ್ನು ಜಾರಿಗೆ ತಂದಿವೆ. ಉತ್ಪನ್ನ ಹೆಚ್ಚುವ ಹಾಗೂ ಉತ್ಪನ್ನಕ್ಕೆ ಧಕ್ಕೆಬಾರದ ರೀತಿಯಲ್ಲಿ ವ್ಯವಸಾಯದ ವ್ಯವಸ್ಥೆಯಿರಬೇಕೆಂಬುದೇ ಈ ಸುಧಾರಣೆಗಳ ಉದ್ದೇಶ.

"ಶ್ರೀ ಜತ್ತಿಯವರಿಗಿಂತ ಮೆಕಾರ್ಥರೇ ಉತ್ತಮ"

ಜಪಾನಿನಲ್ಲಿ ಮೆಕಾರ್ಥರ್ ಕಾಲದಲ್ಲಿ ಭೂಸುಧಾರಣೆಗಳನ್ನು ಜಾರಿಗೆ ತರಲಾಯಿತು. ರಾಷ್ಟ್ರದ ಕೈಗಾರಿಕೀಕರಣಕ್ಕೆ ಭೂಸುಧಾರಣೆ ಪ್ರಥಮ ಹೆಜ್ಜೆಯಾಗಿದೆ. ಶ್ರೀ ಜತ್ತಿಯವರಿಗಿಂತ ಮೆಕಾರ್ಥರ್ ಒಂದು ಹೆಜ್ಜೆ ಮುಂದೆ ಹೋಗಿದ್ದರು. ನಮ್ಮ ದೇಶದಲ್ಲಿರುವ ವ್ಯವಸ್ಥಾಯ ವ್ಯವಸ್ಥೆ ಕೈಗಾರಿಕೀಕರಣಕ್ಕೆ ಹಾಗೂ ಅರ್ಥಿಕಾಭಿವೃದ್ಧಿಗೆ ಖಂಡಿತ ಅಡ್ಡಿಯಾಗಿದೆ. ಆದರಿಂದಾಗಿ ಸುಧಾರಣೆಗಳು ಅತ್ಯಗತ್ಯವಾಗಿದೆ.

೫ ಎಕರೆ ಭೂಮಿಗಿಂತ ಕಡಿಮೆಯಿರುವವರು ಸಾವಿರಾರು ಮಂದಿಯಿದ್ದಾರೆ. ಸಣ್ಣ ಹಿಡುವಳಿ ಎಂದ ಮೇಲೆ ಅಲ್ಪ ಜೀವನ ಮಟ್ಟ. ಒಂದು ಕಡೆ ಈ ರೀತಿಯಿದ್ದರೆ ಮತ್ತೊಂದು ಕಡೆ ಕೆಲವರಲ್ಲಿ ಅಪಾರ ಜಮೀನು ಇದ್ದುದು ಸರ್ವ ಮಾನ್ಯವಿದೆ

"ದೇಶದಲ್ಲಿ ಅಪಾರ ನಿರುದ್ಯೋಗವಿದೆ. ಈ ಸಮಸ್ಯೆಯನ್ನು ಪರಿಹಾರ ಮಾಡುವ ದೃಷ್ಟಿಯಿಂದಲೂ ಭೂಸುಧಾರಣೆಗಳು ಅಗತ್ಯವಾಗಿದೆ"

ಎಲ್ಲ ದೃಷ್ಟಿಗಳಿಂದಲೂ ಭೂಸುಧಾರಣೆಗಳು ಅಗತ್ಯ. ಭೂಮಾಲಿಕರ ಹಾಗೂ ರೈತರ ಪರಸ್ಪರ ಕೇಳಿಕೆಗಳ ಮಧ್ಯೆ ಸಮತೂಕವಿಡಲು ಪ್ರಯತ್ನಪಟ್ಟಿರುವ ಅಪರಾಧವನ್ನು ಜತ್ತಿ ಸಮಿತಿಯು ಮಾಡಿದೆ.

ಮೈಸೂರು ರಾಜ್ಯದಲ್ಲಿ ರೈತ—ಮಾಲಿಕ ವ್ಯವಸಾಯ ವ್ಯವಸ್ಥೆ ಇದೆ. ಆದರಿಂದ ಸುಧಾರಣೆಗಳು ಅಗತ್ಯವಿಲ್ಲ ಎಂಬುವನ್ನು ಒಪ್ಪುವುದಿಲ್ಲ. ರಾಜ್ಯದಲ್ಲಿ ಭೂಮಿ ಸರ್ವಮಾನ್ಯವಿದೆ.

ಭೂಮಾಲಿಕರ ಹಿತರಕ್ಷಣೆಗೇ ಹೆಚ್ಚು ಗಮನ!

ಮಾಲಿಕರು ಸ್ವಂತ ಸಾಗುವಳಿಗಾಗಿ ಜಮೀನನ್ನು ಬಯಸುವುದನ್ನು ಜತ್ತಿ ಸಮಿತಿ ಪವಿತ್ರವೆಂದು ಭಾವಿಸಿದೆ. ಸ್ವಂತ ಸಾಗುವಳಿಗಾಗಿ ಗೇಣಿದಾರರಿಂದ ಜಮೀನು ವಾಪಸು ಪಡೆಯುವ ಅವಕಾಶದಲ್ಲೇ ಎಲ್ಲಾ ತಂಟೆ ಇರೋದು. ಜತ್ತಿ ಸಮಿತಿ ಪ್ರತಿಯೊಂದು ಘಟ್ಟದಲ್ಲೂ ಭೂಮಾಲೀಕರ ಹಕ್ಕುಗಳನ್ನು ರಕ್ಷಿಸಲು ಪ್ರಯತ್ನಿಸಿದೆ. ಪ್ಲಾನಿಂಗ್ ಕಮಿಷನ್ ಹೇಳಿದಂತೆಯೂ ನಡೆದಿಲ್ಲ.

ಪರಿಮಿತಿ, ಕುಟುಂಬ ಹಿಡುವಳಿಯ ಮೂರರಷ್ಟು ಇರಬೇಕೆಂದು ಯೋಜನಾ ಕಮಿಷನ್ ಹೇಳಿದರೆ, ಜತ್ತಿ ಸಮಿತಿ ನಾಲ್ಕರಷ್ಟು ಶಿಫಾರಸು ಮಾಡಿದೆ.

ಗೇಣಿ ಪರಿಮಾಣವನ್ನು ಈಗ ಮುಂಬೈ ಭಾಗದಲ್ಲಿರುವ ಒನೇ ಒಂದು ಭಾಗಕ್ಕೆ ಬದಲಾಗಿ ಐದನೇ ಒಂದು ಭಾಗ ಮತ್ತು ನಾಲ್ಕನೇ ಒಂದು ಭಾಗ ಇರಬೇಕೆಂದು ಸಮಿತಿ ನಿಗದಿ ಮಾಡಿದೆ. ಭೂಸುಧಾರಣೆಗಳು ಜಾರಿಗೆ ಬಂದ ನಂತರ ರೈತ ಹೆಚ್ಚು ಗೇಣಿ ಕೊಡಬೇಕೆಂಬುದು ಭೂಸುಧಾರಣೆಯೇ?

ರಾಜಸ್ಥಾನ ಸರಕಾರ ನೇಮಿಸಿದ ಸಮಿತಿ ೫ರಿಂದ ೭ ಮಂದಿ ಸದಸ್ಯರ ಕುಟುಂಬಕ್ಕೆ ೨,೪೦೦ ರೂಪಾಯಿ ಆದಾಯದ ಜಮೀನನ್ನು ಪರಿಮಿತಿಯಾಗಿ ಶಿಫಾರಸು ಮಾಡಿದೆ.

ಇರುವ ಜಮೀನಿನ ಪ್ರಮಾಣ ಹಾಗೂ ಸಾಮಾಜಿಕ ನ್ಯಾಯಗಳೇ ಆಧಾರವಾಗಿದ್ದಲ್ಲಿ ಜತ್ತಿ ಸಮಿತಿ ಇನ್ನೂ ಕಡಿಮೆಯಾಗಿ ಪರಿಮಿತಿಯನ್ನು ಶಿಫಾರಸು ಮಾಡುತ್ತಿತ್ತು.

ಉಳುವವನಿಗೆ ಭೂಮಿ ಒದಗಬೇಕೆಂಬ ದೃಷ್ಟಿಗಿಂತ ಭೂಮಾಲೀಕನಿಗೆ ಭೂಮಿ ಉಳಿಯಬೇಕೆಂಬ ಗಣನೆಯಿಂದ ಸಮಿತಿ ಸಮಸ್ಯೆಯನ್ನು ನೋಡಿದೆ. ಸ್ವಂತ ಸಾಗುವಳಿಯ ಹಕ್ಕನ್ನು ಚಲಾಯಿಸಿ, ಭೂಮಾಲೀಕರು ಭೂಮಿ ಪಡೆದು, ಈಗಾಗಲೇ ಇರುವ ನಿರುದ್ಯೋಗಿಗಳ ಸೈನ್ಯಕ್ಕೆ ಇನ್ನೂ ಹೆಚ್ಚು ಮಂದಿ ಸೇರುವಂತಾಗುವುದು.

ಆಸ್ತಿಯ ವಿಂಗಡನೆ ಈಗಾಗಲೇ ನಡೆದುಹೋಗಿದೆ

ಸಮಿತಿಯ ಶಿಫಾರಸುಗಳನ್ನು ಜಾರಿಗೆ ತರುವುದರಿಂದಲೇ ಗ್ರಾಮಾಂತರ ಪ್ರದೇಶಗಳಲ್ಲಿ ದೊಡ್ಡ ಬದಲಾವಣೆಯಾಗುವುದಿಲ್ಲ. ಈ ಸುಧಾರಣೆಗಳನ್ನು ನಿರೀಕ್ಷಿಸಿ, ಈಗಾಗಲೇ ಆಸ್ತಿಯ ವಿಂಗಡಣೆ ನಡೆದುಹೋಗಿದೆ.

ಭೂಮಿ ಹಂಚಿಕೆಯ ವಿಷಯದಲ್ಲಿ ಪ್ರಜಾಪ್ರಭುತ್ವದ ಅಂಶದ ಪಾತ್ರವಿಲ್ಲವಾಗಿದೆ. ಯಾರೊಡನೆ ಇರಲು ನಮ್ಮಲ್ಲಿ ಅನೇಕ ಮಂದಿ ಬಯಸುವುದಿಲ್ಲವೋ ಅಂಥ ವ್ಯಕ್ತಿಯಾದ ಜನರಲ್ ಮೆಕಾರ್ಥರ್ ಅವರು ಜಪಾನಿನಲ್ಲಿ ಭೂಮಿ ಹಂಚಿಕೆ ಹಾಗೂ ಸಂಬಂಧಪಟ್ಟ ಸಮಸ್ಯೆಗಳ ನಿರ್ವಹಣೆಗೆ ಗ್ರಾಮಗಳಲ್ಲಿ ಚುನಾಯಿತ ಸಮಿತಿಗಳಿರಬೇಕೆಂದು ಹೇಳಿದರು. ಭೂಮಿ ಹಂಚಿಕೆಯ ಬಗ್ಗೆ ಇರಬೇಕಾದ ಯಂತ್ರ ಸಾಧನದ ಬಗ್ಗೆ ಸಮಿತಿ ಏನನ್ನೂ ಹೇಳಿಲ್ಲ. ಅದರ ಪ್ರಶ್ನಾವಳಿಯಲ್ಲೂ ಈ ಅಂಶವಿರಲಿಲ್ಲ.

"ಈ ಸುಧಾರಣೆಗಳಿಂದಲೇ ಉದ್ದೇಶಿತ ಧ್ಯೇಯ ಸಾಧನೆಯಾಗುವುದಿಲ್ಲ. ಜೊತೆಯಲ್ಲಿಯೇ ಸಹಕಾರ ಪದ್ಧತಿಯೂ ಜಾರಿಗೆ ತರಬೇಕು. ಭಾರತದಲ್ಲಿ ಈ ಪದ್ಧತಿ ಸ್ವಲ್ಪ ಮಟ್ಟಿಗೆ ವಿಫಲವಾಗಿರುವುದು ನಿಜ. ಅದಕ್ಕೆ ಕಾರಣಗಳಿವೆ. ಭೂಸುಧಾರಣೆಗಳ ಕಾರಣ ಈ ಕೊರತೆಗಳು ಸರಿ ಹೋಗುತ್ತವೆ.

'ಭೂ ಸುಧಾರಣೆಗಳು, ಸಹಕಾರ ವ್ಯವಸ್ಥಾಯ ಪದ್ಧತಿ, ಅನಂತರ ಸಾಮೂಹಿಕ ಪದ್ಧತಿಗಳಿಂದ ಚೀನಾದಲ್ಲಿ ಅಪಾರ ಸಾಧನೆಯಾಗಿದೆ.

"ಜತ್ತಿ ಸಮಿತಿಯ ಶಿಫಾರಸ್ಸುಗಳ ತಿದ್ದುಪಡಿಯಾಗಲಿ, ಆದರೆ ಭೂಮಾಲೀಕರ ಪರವಾಗಿ ಅಲ್ಲ. ಯಾವ ಮೂಕ ಮಿಲಿಯನ್ ಜನತೆಯ ಬಗ್ಗೆ ಗಾಂಧೀಜಿ ಮಾತನಾಡಿದರೋ ಅವರ ಪರವಾಗಿ ತಿದ್ದುಪಡಿಯಾಗಲಿ." ಎಂದು ಹೇಳಿ ಸರದಾರ್ ಪಟೇಲರು ಕರ್ನಾಟಕದ ರೈತರನ್ನು ಪ್ರಶಂಸಿಸಿರುವುದನ್ನು ಉದ್ಧರಿಸಿ "ಕರ್ನಾಟಕದ ರೈತರಿಗೆ ದ್ರೋಹ ಮಾಡಬೇಡಿ" ಎಂದರು.

ಪೆರಿಯಾಪಟ್ಟಣದ ಉಪಚುನಾವಣೆ

ಕಮ್ಯೂನಿಸ್ಟ್ ಪಾರ್ಟಿಯ ಚುನಾವಣಾ ಪ್ರಚಾರ

16-3-58 ಪಿರಿಯಾಪಟ್ಟಣದ ತಾಲ್ಲೂಕು ಬೆಟ್ಟದ ಪುರದಲ್ಲಿ, ಬಹಳ ಕಾಲದಿಂದಲೂ ಕಾಂಗ್ರೆಸ್ಸ್ ಸಂಸ್ಥೆಯಲ್ಲಿ ದುಡಿದುಕೊಂಡು ಬಂದು ಈಗ ಕಾಂಗ್ರೆಸಿನ ರೀತಿ ನೀತಿಗಳಿಂದ ಬೇಜಾರುಬಿದ್ದು ಕಾಂಗ್ರೆಸ್ ತ್ಯಜಿಸಿರುವ ಟಿ. ತಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯು ನಡೆಯಿತು. ಸಂಗರಶೆಟ್ಟಿಹಳ್ಳಿ ಅಣ್ಣಯನವರು ಉದ್ಘಾಟನೆ ಮಾಡಿದರು. ಸಭೆಯಲ್ಲಿ ಶ್ರೀಗಳಾದ ಡಾಕ್ಟರ್ ಅಪ್ಪಣ್ಣ, ನಂಜುಂಡೇಶ್ವರ ಮತ್ತು ವಕೀಲರಾದ ಬೆಳ್ಳಪ್ಪ, ಕರುಣಾಕರನ್ ಮತ್ತು ಉಗ್ರಪ್ಪನವರು ಸಭಿಕರನ್ನುದ್ದೇಶಿಸಿ ಭಾಷಣ ಮಾಡಿದರು. ಭಾಷಣಕಾರರು ಕಾಂಗ್ರೆಸ್ ಅಧಿಕಾರದಿಂದ ಜನತೆಗಾಗಿರುವ ಕುಂದು ಕೊರತೆಗಳನ್ನು ವಿವರಿಸಿದರು. ಕಮ್ಯೂನಿಸ್ಟ್ ಪಾರ್ಟಿಯ ಧ್ಯೇಯ ಧೋರಣೆಗಳನ್ನು ತಿಳಿಸಿ ಪಾರ್ಟಿಯ ಉಮೇದುವಾರರಾಗಿ ನಿಂತಿರುವ ಕಾ| ಬಿ.ಎನ್. ಕುಟ್ಟಪ್ಪನವರಿಗೆ ಇಲ್ಲಿನ ನಿವಾಸಿಗಳು ತಮ್ಮ ಮತವನ್ನು ನೀಡಿ ಜಯಶೀಲರನ್ನಾಗಿ ಮಾಡಬೇಕೆಂದು ಪ್ರಾರ್ಥಿಸಿದರು. ಸಭಿಕರಿಗೆ ಉಮೇದುವಾರರಾದ ಬಿ. ಎನ್. ಕುಟ್ಟಪ್ಪನವರನ್ನು ಪರಿಚಯ ಮಾಡಿದನಂತರ ಅವರು ತಾವು ಪಾರ್ಟಿಯ ತೀರ್ಮಾನದಂತೆ ಜನತೆಯ ಹಿತಕ್ಕೋಸ್ಕರ ಸತತವಾಗಿ ದುಡಿಯಲು ಸಿದ್ಧನಿದ್ದೇನೆಂದು ತಿಳಿಸಿದರು.

ತಾ. 17-3-58 ರಂದು ಕಿತ್ತೂರು ಗ್ರಾಮದಲ್ಲಿ ಶ್ರೀಗಳಾದ ನಿಂಗೇಗೌಡರ ಅಧ್ಯಕ್ಷತೆಯಲ್ಲಿ ಚುನಾವಣಾ ಪ್ರಚಾರದ ಸಭೆಯು ಜರುಗಿತು ಸಭೆಯಲ್ಲಿ ಶ್ರೀಗಳಾದ ಡಿ. ತಮ್ಮಯ್ಯ ಹನುವಿನ ಕಾವಲು ಬಸವೇಗೌಡರು, ಶ್ರೀ ಅಣ್ಣಯ್ಯ, ಉಗ್ರಪ್ಪ ಮತ್ತು ಬಿ.ಎನ್. ಕುಟ್ಟಪ್ಪನವರು ಭಾಷಣ ಮಾಡಿದರು. ರೈತರೆಲ್ಲಾ ಒಗ್ಗಟ್ಟಾಗಿ ಸಂಘವನ್ನು ಸ್ಥಾಪಿಸಿಕೊಂಡು ಅಮುಖೇರಿತರ ತಮ್ಮ ಹಿತಕ್ಕಾಗಿ ಹೋರಾಡಬೇಕೆಂದು ತಿಳಿಸಿ ಈ ಕಾರ್ಯದಲ್ಲಿ ಸದಾ ಕಮ್ಯೂ

(೧೦ನೇ ಪುಟ ನೋಡಿ)

ಸಹಕಾರಿ ಸಂಸ್ಥೆಯ ಹೆಸರಿನಲ್ಲಿ ಮೋಸ

ಕಾಂಗ್ರೆಸಿಗರಿಂದ ರೂ. 50,000ಕ್ಕೆ ಪರ್ಮಿಟ್ ಮಾರಾಟ!

ನಮ್ಮ ರಾಜ್ಯದಲ್ಲಿ ಸಹಕಾರಿ ಸಂಸ್ಥೆಗಳನ್ನು ಮೋಸ ಮತ್ತು ಸುಲಿಗೆ ಉಪಕರಣವಾಗಿ, ಶೋಷಣೆ ಕೇಂದ್ರವಾಗಿ, ಬೆಳಸುವುದು ಮಿತಿಮೀರಿ ಬೆಳದಿದೆ. 'ಜನಶಕ್ತಿ'ಯಲ್ಲಿ ಈಗಾಗಲೆ ಸಹಕಾರಿ ಸಂಸ್ಥೆಯ ಅವ್ಯವಸ್ಥೆಯ ಬಗ್ಗೆ ಲೇಖನಗಳು ಬಂದಿವೆ. ಸರಕಾರಕ್ಕೆ ಗೊತ್ತಿದ್ದರೂ, ಸರಕಾರದ ಆಡಿಟರುಗಳೇ ವಿಚಾರಣೆಯಾಗಬೇಕೆಂದಿದ್ದರೂ, ಸರಕಾರಿ ಸಂಸ್ಥೆಯ ದುರ್ಲಾಭ ಪಡೆಯುವುದನ್ನು ನಿಲ್ಲಿಸಲು ಸರ್ಕಾರ ಮುಂದೆ ಬಂದಿಲ್ಲ, ಬದಲು ಈ ಲಂಚಬಡುಕ—ವಂಚಕ ಅಧಿಕಾರಿಗಳ ರಕ್ಷಣೆಗೇ ನಿಲ್ಲುತ್ತದೆ.

ಇದೀಗ ದೊಡ್ಡಬಳ್ಳಾಪುರದ ತೂಬಗೇ ಹೋಬಳಿಯ ಗಂಟಿಗಾನಹಳ್ಳಿ ಸರ್ಕಲ್ ಸಹಕಾರಿ ಸಂಸ್ಥೆಯ ಪರ್ಮಿಟು ಪಡೆದು ಮಾರಿದ ಹೆಸರಿನಲ್ಲಿ, ಅದರ ಅಧ್ಯಕ್ಷರು ಪರ್ಮಿಟು ಪಡೆದು ಮಾರಿದ ಮೋಸದ ಪ್ರಕರಣ ಬಯಲಾಗಿದೆ. ಈ ಸಹಕಾರಿ ಸಂಸ್ಥೆಯ ಅಧ್ಯಕ್ಷರಾದ ಮಾರಗಳ ಹೊನ್ನೂರಪ್ಪನವರು ಇದೀಗ ಹೊಸ ನೆತ್ತರಿನ ಕಾಂಗ್ರೆಸ್ಸಿಗರಾಗಿರುವುದು ಗಮನಾರ್ಹ ಬಹುಶಃ ಇಂಥವರನ್ನೇ ಸೇರಿಸಿ ಕಾಂಗ್ರೆಸ್ಸನ್ನು ಬಲಗೊಳಿಸುವ ಇಚ್ಛೆ ಕಾಂಗ್ರೆಸ್ ಮಹಾನಾಯಕರಿಗಿರಬೇಕು.

ಈ ಸಹಕಾರಿ ಸಂಸ್ಥೆಯ ಅಧ್ಯಕ್ಷರ ವಿರುದ್ಧವಾಗಿ ಸಂಸ್ಥೆಯ ಷೇರುದಾರರು ಸೇರಿ ದಸ್ಕತು ಸಂಗ್ರಹಿಸಿ, ವಿಚಾರಣೆ ನಡೆಸಲು ಮನವಿ ಮಾಡಿರುತ್ತಾರೆ. ಆದರೆ ಸಹಕಾರಿ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳಾಗಲೀ, ಇವರಿಗೆ ಕಮಿಷನ್ ಕೊಟ್ಟ ಮಾರ್ಕೆಟಿಂಗ್ ಆಫೀಸರರಾಗಲೀ ಈ ಪರ್ಮಿಟ್ ಮಾರಾಟ ಪ್ರಕರಣದ ತಹಶೀಲು ನಡೆಸಲು ಸಿದ್ಧರಾಗಿಲ್ಲ. ಇವರನ್ನು ಕೇಳಿದರೆ 'ನೀವೂ ಪರ್ಮಿಟ್ ಪಡೆದು ಹಣಗಳಿಸಿ' ಎಂದು ಕೂಡಾ ಅಂದಿರುತ್ತಾರಂತೆ.

ಸಂಸ್ಥೆಯ ಹೆಸರಿನಲ್ಲಿ ಅಧ್ಯಕ್ಷರು 100 ಟನ್ ಒಣಗಿದ ಮೆಣಸಿನ ಕಾಯಿಯನ್ನು ಸಪ್ಲೈ ಮಾಡಲು ಪರ್ಮಿಟ್ ಪಡೆದು ಮದ್ರಾಸಿನ ಯಾರೋ ಏಜಂಟರಿಗೆ ರೂ 50,000ಕ್ಕೆ ಮಾರಿದ್ದಾರೆಂದು ಆಡಿಕೊಳ್ಳಲಾಗುತ್ತಿದೆ. ಇಲ್ಲಿ, ದೊಡ್ಡಬಳ್ಳಾಪುರದಲ್ಲಿ ಮನೆಯ ಬಳಕೆಗೆ ಸಾಲುವಷ್ಟು ಕೂಡ ಮೆಣಸು ಬೆಳೆ ಆಗುವುದಿಲ್ಲ ಎಂಬುದನ್ನು ಸೂಚಿಸ ಬಯಸುತ್ತೇವೆ.

ಈ ಬಗ್ಗೆ ಮದ್ರಾಸಿನಿಂದ ಸಿ. ಐ. ಡಿ. ಬಂದಿದ್ದಾರೆಂದೂ ಆದರೆ ಈ ಅಧ್ಯಕ್ಷರ ಸಂಬಂಧಿಯೋರ್ವರು ಕೇಂದ್ರದ ಸಚಿವ ಸಂಪುಟದಲ್ಲಿರುವ ಕಾರಣ, ಸಿ. ಐ. ಡಿ. ಗಳು ಬಂದ ದಾರಿಗೆ ಸುಂಕವಿಲ್ಲದೆ ಹಿಂದಿರುಗಿರುವರೆಂದೂ ಹೇಳಲಾಗುತ್ತಿದೆ. ಇದು ನಿಜವೇ! ಹಾಗಿದ್ದಲ್ಲಿ ಈ ಪ್ರಕರಣದ ವಿಚಾರಣೆ ಕೂಡಲೇ ಆಗಬೇಕು. ಸಹಕಾರಿ ಚಳವಳಿಯನ್ನು ಹುಟ್ಟಿದಲ್ಲಿಯೇ ಹಿಸುಕಿಹಾಕುತ್ತಿರುವ ಇಂಥಾ ಮೋಸಗಾರ—ಸ್ವಾರ್ಥಿಗಳನ್ನು ಶಿಕ್ಷಿಸಬೇಕು. ಆದರೆ... ಇವರ ಆಶ್ರಯದಾತರಾದ ಕಾಂಗ್ರೆಸ್ ಜನತೆಯ ಒತ್ತಾಯವನ್ನು ಮಾನ್ಯ ಮಾಡುವುದೇ?!

'ಸಹಕಾರಿ'

ನಿಜಲಿಂಗಪ್ಪನವರ ಸರಕಾರ ಉರುಳುವ ಸ್ಥಿತಿಯಲ್ಲಿ

(೧ನೇ ಪುಟದಿಂದ)

ಯಿಷಿಗೂ ಕಾಲವಿಾರಿದೆ. ನಿಜಲಿಂಗಪ್ಪನವರ ಸರಕಾರ ಉರುಳುವುದು ಖಂಡಿತವಾಗುತ್ತಿದೆ. ನನ್ನ ಮೇಲಿನ ಆರೋಪವೇನೆಂಬುದೇ ತಿಳಿಯದು, ಸಾಧ್ಯವಾದಷ್ಟು ಮಟ್ಟಿಗೆ ಶಕ್ತಿಮೀರಿ ಮಂತ್ರಿಮಂಡಲ ಜನತೆಯ ಏಳಿಗೆಗಾಗಿ ಶ್ರಮಿಸುತ್ತಿದೆ ಎಂದು ನಿಜಲಿಂಗಪ್ಪನವರು ಹೇಳಿಕೊಂಡಿದ್ದಾರೆ. ತಾವು ಅಧಿಕಾರಕ್ಕೆ ಬಂದ ನಂತರ ಏನು ಸೇವೆ ಸಲ್ಲಿಸಿರುವರೆಂಬುದನ್ನು ಅವರೇ ವಿವರಿಸಬೇಕಾಗಿದೆ.

ಈ ಸರಕಾರ ಹೋಗಬೇಕು

ನಿಜಲಿಂಗಪ್ಪನವರ ಸರಕಾರದಲ್ಲಿ ಅಸಮರ್ಥತೆ ಇದೆ ಎಂಬುದು ಸರ್ವವಿದಿತವಾಗಿದೆ. ನಿಜಲಿಂಗಪ್ಪನವರು ಹೋಗಿ ಮತ್ತೊಬ್ಬರು ಅಧಿಕಾರಕ್ಕೆ ಬಂದಲ್ಲಿ ಜನತೆಯ ಜೀವನದಲ್ಲಿ ಮಹತ್ತರವಾದ ಬದಲಾವಣೆ ಏನು ಆಗದು ಎಂಬುದು ನಿಜ. ಕಾಂಗ್ರೆಸ್ಸಿನ ಆಡಳಿತ ನೀಯಲ್ಲೇನು ಬದಲಾವಣೆಯಾಗದು. ಆದರೆ ನಿಜಲಿಂಗಪ್ಪನವರ ಸರಕಾರವು ಅನುಸರಿಸುತ್ತಿರುವ ನೀತಿಯಿಂದಾಗಿ ಅವರ ಮಂತ್ರಿಮಂಡಳ ಹೋಗುವುದು ಅಗತ್ಯವಾಗಿದೆ. ವಿಮಾನ ಕಾರ್ಖಾನೆ ನೌಕರರ ಹೋರಾಟದ ಮೇಲೆ ಅಮಾನುಷ ದಬ್ಬಾಳಿಗೆ ನಡೆಸಿ, ಗೋಳೀಬಾರಿನ ಕುರಿತು ವಿಚಾರಣೆಯನ್ನು ನಡೆಸದೆ, ನೌಕರರ ಪ್ರಶ್ನೆಯನ್ನು ಕುರಿತು ಯಾವ ಕ್ರಮವನ್ನು ಕೈಗೊಳ್ಳದೆ ಕೈಕಟ್ಟಿ ಕುಳಿತಿರುವ ಈ ಸರಕಾರ ಉಳಿದರೇನು ಅಳಿದರೇನು? ಅದಷ್ಟು ಶೀಘ್ರವಾಗಿ ಸಮಗ್ರವಾದ ಭೂಸುಧಾರಣಾ ಶಾಸನವನ್ನು ತರುವುದಾಗಿ ಆಶ್ವಾಸನೆಯನ್ನಿತ್ತು ಅದನ್ನು ಈಗ ಸರಕಾರ ಮುಂದೂಡುತ್ತಿದೆ. ಜಿಲ್ಲಾ ಬೋರ್ಡುಗಳ ಚುನಾವಣೆಯನ್ನು ಮುಂದಕ್ಕೆ ಹಾಕುತ್ತಿದೆ. ಯಾವ ಕ್ಷೇತ್ರದಲ್ಲಿಯೇ ಆಗಲಿ ದೃಢವಾದ ನೀತಿಯನ್ನು ನಿಜಲಿಂಗಪ್ಪನವರ ಸರಕಾರ ಅನುಸರಿಸಿಲ್ಲ. ಹೆಜ್ಜೆ ಹೆಜ್ಜೆಗೂ ಸರಕಾರದ ಅಸಮರ್ಥತೆ ಎದ್ದು ಕಾಣುತ್ತಿದೆ.

ಒಟ್ಟಿನಲ್ಲಿ ಕಾಂಗ್ರೆಸ್ ಶಾಸನ ಸಭಾ ಪಕ್ಷದಲ್ಲಿ ಇಂದು ಕೋಲಾಹಲವೆದ್ದಿದೆ. ಅಧಿಕಾರಲಾಲಸೆಗಾಗಿ ಕಚ್ಚಾಟ ನಡೆಯುತ್ತಿದೆ. ಮುಂದಿನ ಬೆಳವಣಿಗೆಗಳನ್ನು ಜನತೆ ಆಸಕ್ತಿಯಿಂದ ಎದುರು ನೋಡುತ್ತಿದ್ದಾರೆ.

ಪತ್ರಕರ್ತರ ವೇತನ ಮಂಡಳಿ ನಿರ್ಧಾರ ನ್ಯಾಯಬಾಹಿರ !

ಕಾರ್ಯನಿರತ ಪತ್ರಕರ್ತರ ವೇತನ ಮಂಡಳಿಯ ನಿರ್ಧಾರಗಳು ಕಾರ್ಯನಿರತ ಪತ್ರಕರ್ತರ ಶಾಸನ ಬಾಹಿರವಾಗಿದೆಯೆಂದು ತಿಳಿಸಿ, ಸುಪ್ರೀಂ ಕೋರ್ಟು ಆ ನಿರ್ಧಾರಗಳನ್ನು ತಳ್ಳಿಹಾಕಿದೆ. ತಾವಾಗಿಯೇ ರಾಜಿನಾಮೆ ಇತ್ತಾಗಲೂ ಪತ್ರಕರ್ತರಿಗೆ ಗ್ರಾಚುಯಿಟಿ ಹಣಸಂದಾಯವಾಗಬೇಕೆಂಬ ವಿಧಿಯೊಂದನ್ನುಳಿದು, ಪತ್ರಕರ್ತರ ಶಾಸನ ರಾಜ್ಯಾಂಗ ಬದ್ಧವಾಗಿದೆಯೆಂದು ಸುಪ್ರೀಂ ಕೋರ್ಟು ಎತ್ತಿ ಹಿಡಿದಿದೆ.

ಸುಪ್ರೀಂ ಕೋರ್ಟಿನ ರಾಜ್ಯಾಂಗ ಪೀಠವು ಈ ತೀರ್ಪನ್ನು ಒಮ್ಮತದಿಂದ ಇತ್ತಿದೆ. ಈ ತೀರ್ಪನ್ನು ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿ ಭಗವತಿಯವರು ಪಠಿಸಿದರು. ತೀರ್ಪು ಸುಮಾರು ೨೦೦ ಪುಟಗಳು ಮೀರಿವೆ.

ಈ ತೀರ್ಪಿನಲ್ಲಿ ಮುಖ್ಯವಾಗಿ ವೇತನ ಸಮಿತಿಯು ಅಂತಿಮವಾಗಿ ವೇತನ ಮತ್ತು ಸ್ಕೇಲುಗಳನ್ನು ನಿಗದಿ ಮಾಡುವ ಮುನ್ನ ವೇತನ ಸಮಿತಿಯು ಪತ್ರಿಕಾ ಸಂಸ್ಥೆಗಳ ಸಂಬಳ ನೀಡುವ ಶಕ್ತಿಯನ್ನು ಪರಿಗಣಿಸಿಲ್ಲ ಎಂಬುದಾಗಿದೆ. ಪತ್ರಿಕೆಗಳನ್ನು ವರ್ಗೀಕರಣ ಮಾಡುವಾಗ ಒಂದೇ ಸಂಸ್ಥೆಯ ಬಲವಾದ ಮತ್ತು ದುರ್ಬಲವಾದ ಪತ್ರಿಕೆಗಳನ್ನು ಒಟ್ಟಿಗೆ ಸೇರಿಸಿರುವುದರಿಂದ ಒಂದೇ ಗುಂಪಿನ ಚಿಕ್ಕ ಪತ್ರಿಕೆಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿದೆ. ವೇತನ ಸಮಿತಿಯು ಭಾರತೀಯ ಪತ್ರಿಕೋದ್ಯಮದ ಮೇಲ್ಮೆಗಾಗಿ ಮೇಲಿನಂತೆ ವರ್ಗೀಕರಣ ಮಾಡುವಾಗ ಗುಂಪಿನ ದುರ್ಬಲ ಪತ್ರಿಕೆಗಳ ಮೇಲೆ ಆಗಬಹುದಾದ ಆರ್ಥಿಕ ಹೊರೆಯನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ.

ಪತ್ರಕರ್ತರ ಶಾಸನ ಮತ್ತು ವೇತನ ಮಂಡಳಿ ನಿರ್ಧಾರಗಳ ರಾಜ್ಯಾಂಗ ಬದ್ಧತೆಯನ್ನು ಪ್ರಶ್ನಿಸಿ ಎಕ್ಸ್‌ಪ್ರೆಸ್ ಪತ್ರಿಕಾ ತಂಡ, ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ಸಂಸ್ಥೆ ಫ್ರೀಪ್ರೆಸ್ ಪತ್ರಿಕಾತಂಡ ಮತ್ತು ಸೌರಾಷ್ಟ್ರ ಟ್ರಸ್ಟ್ ಪತ್ರಿಕೆಗಳು ಮತ್ತು ಕೆಲವು ಅಹಮದಾಬಾದ್ ಪತ್ರಿಕೆಗಳು ಅರ್ಜಿ ಸಲ್ಲಿಸಿದ್ದವು.

ಅರ್ಜಿ ಕೋರ್ಟಿನಲ್ಲಿರುವಾಗಲಾಗಲೇ ಭಾರತದಲ್ಲಿನ ಪತ್ರಿಕೆಗಳು ವೇತನ ಮಂಡಳಿಯ ನಿರ್ಧಾರಗಳನ್ನು ಪೂರ್ಣವಾಗಿಯು ಮತ್ತೆ 57 ಪತ್ರಿಕೆಗಳು ಅರ್ಧಂಬರ್ಧವಾಗಿಯೂ ಅಮಲಿಗೆ ತಂದಿತು. ಸುಪ್ರೀಂ ಕೋರ್ಟಿನ ಈ ತೀರ್ಪಿನಿಂದಾಗಿ ಪತ್ರಿಕಾ ಪ್ರಪಂಚದಲ್ಲಿ ಹೊಸ ಸಮಸ್ಯೆವೆದ್ದಿದೆ. ವೇತನ ಸಮಿತಿಯಲ್ಲಿ ಪತ್ರಕರ್ತರ ಪರವಾಗಿ ಸದಸ್ಯರಾಗಿದ್ದ ಶ್ರೀ ಆರ್. ವೆಂಕಟರಾಮನ್‌ರವರು ಸುಪ್ರೀಂ ಕೋರ್ಟಿನ ತೀರ್ಪಿನ ಬಗ್ಗೆ ತಮ್ಮ ಅಸಂತುಷ್ಟ ವ್ಯಕ್ತಗೊಳಿದ್ದಾರೆ. ಪತ್ರಕರ್ತರ ರಾಷ್ಟ್ರೀಯ ಫೆಡರೇಶನ್ ಪರಿಸ್ಥಿತಿಯನ್ನು ಕುರಿತು ಪರ್ಯಾಲೋಚಿಸಲಿದೆ.

ಕಮ್ಯೂನಿಸ್ಟ್ ಪಾರ್ಟಿಯ ಚುನಾವಣಾ ಪ್ರಚಾರ

(೩ನೇ ಪುಟದಿಂದ)

ನಿಸ್ಟ್ ಪಾರ್ಟಿಯು ಭಾಗಿಯಾಗಿ ಶ್ರಮಿಸಲು ಸಿದ್ಧವಿದೆಯೆಂದೂ ಮತ್ತು ಕಾಂಗ್ರೆಸಿವರು ನಡೆಸುತ್ತಿರುವ ದುರಾಡಳಿತವನ್ನು ಎದುರಿಸಲು ಕಮ್ಯೂನಿಸ್ಟ್ ಪಾರ್ಟಿಯ ಉಮೇದುವಾರರಾದ ಕಾಂ| ಕುಟ್ಟಪ್ಪನವರನ್ನು ಚುನಾಯಿಸಲು ಗ್ರಾಮಸ್ಥರೂ ಮತ್ತಿತರರೂ ತಮ್ಮ ಘನವಾದ ಓಟನ್ನು ಕೊಡಬೇಕಾಗಿ ಪ್ರಾರ್ಥಿಸಲಾಯಿತು.

ಇದೇ ರೀತಿಯಲ್ಲಿ ಅತ್ತಿಗೋಡು ಮತ್ತು ಮೂಡ್ಲು ಕೊಪ್ಪಲುಗಳಲ್ಲಿ ಸಭೆ ನಡೆಯಿತು.

ಚುನಾವಣಾ ಪ್ರಚಾರ ಬಿರುಸಿನಿಂದ ಸಾಗುತ್ತಿದೆ. ಇನ್ನೂ ಉತ್ತಮ ರೀತಿಯಲ್ಲಿ ಪ್ರಚಾರ ಕಾರ್ಯಕ್ರಮವನ್ನು ಕೈಗೊಳ್ಳಲು ಪಾರ್ಟಿ ಸದಸ್ಯರು ಮತ್ತು ಹಿತೈಷಿಗಳು ಧನ ಸಹಾಯ ಮಾಡಬೇಕಾಗಿ ಪ್ರಾರ್ಥಿಸುತ್ತೇವೆ.

ಪ್ರತೀ ವಾರ ಪ್ರಕಟವಾಗುತ್ತಿದ್ದಂಥ ಮನೆ ಮುರಿದ ಮಗ—ನಾಟಕವನ್ನು ಕಾರಣಾಂತರದಿಂದ ಪ್ರಕಟಿಸಲಾಗದಿದ್ದುದಕ್ಕೆ ಓದುಗರಲ್ಲಿ ಕ್ಷಮೆ ಕೇಳುತ್ತೇವೆ.

REG. No. M. 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone: 3810